# FINAL ANSWER KEY

| | |
|---|---|
| Question Paper Code: | 70/2025/OL |
| Category Code: | 608/2024 |
| Exam: | Pre Primary Teacher (Kannada) |
| Date of Test | 02-07-2025 |
| Department | Education |

Question1:-ಈ ಕೆಳಗಿನ ಮೂಳೆ ಜೋಡಣೆಗಳಿಗೆ ನೀವು ಯಾವಾಗ ಗಮನ ಕೊಡಬೇಕು ?

1. ಎರಡೂ ಭುಜಗಳಿಂದ ಒಂದೇ ದೂರದಲ್ಲಿ ತಲೆ ಇದ್ದಾಗ
2. ಎದೆ ಮೇಲಕ್ಕೆ ಮತ್ತು ಭುಜಗಳ ಮಟ್ಟದಲ್ಲಿದ್ದಾಗ
3. ಬೆನ್ನು ನೇರವಾಗಿದ್ದಾಗ
4. ದೇಹದ ತೂಕ ಎರಡೂ ಪಾದಗಳ ಮೇಲೆ ಸಮವಾಗಿ ಹಂಚಿಕೆಯಾಗಿದ್ದಾಗ
5. ಪಾದಗಳು ನೆಲದ ಮೇಲೆ ಸ್ವಲ್ಪ ಅಂತರದಲ್ಲಿದ್ದಾಗ

A:-ಕುಳಿತಿದ್ದಾಗ

B:-ನಿಂತಿದ್ದಾಗ

C:-ನಡೆಯುವಾಗ

D:-ಮೇಲಿನ ಯಾವುದೂ ಅಲ್ಲ

Correct Answer:- Option-B

Question2:-ಹೆಪಟೈಟಿಸ್ ಬಿ ಲಸಿಕೆಯನ್ನು ತೆಗೆದುಕೊಳ್ಳುವ ವೇಳಾಪಟ್ಟಿ ಯಾವುದು ?

A:-ಮೊದಲ ಡೋಸ್ - ಜನನದ ಅನಂತರ ತಕ್ಷಣದಲ್ಲಿ
ಎರಡನೇ ಡೋಸ್ - ಆರು ವಾರಗಳ ಅನಂತರ
ಮೂರನೇ ಡೋಸ್ - 6-9 ತಿಂಗಳುಗಳು
ಬೂಸ್ಟರ್ ಡೋಸ್ - 10 ನೇ ವಯಸ್ಸಿನಲ್ಲಿ

B:-ಮೊದಲ ಡೋಸ್ - ಜನನದ ಅನಂತರ ತಕ್ಷಣದಲ್ಲಿ
ಎರಡನೇ ಡೋಸ್ - ಆರು ವಾರಗಳ ಅನಂತರ
ಮೂರನೇ ಡೋಸ್ - 9 ತಿಂಗಳ ಅನಂತರ
ಬೂಸ್ಟರ್ ಡೋಸ್ - 2ನೇ ವಯಸ್ಸಿನಲ್ಲಿ

C:-ಮೊದಲ ಡೋಸ್ - ಜನನದ ಅನಂತರ ತಕ್ಷಣದಲ್ಲಿ
ಎರಡನೇ ಡೋಸ್ - 6 ತಿಂಗಳ ಅನಂತರ
ಮೂರನೇ ಡೋಸ್ - 1ನೇ ವಯಸ್ಸಿನಲ್ಲಿ
ಬೂಸ್ಟರ್ ಡೋಸ್ 10ನೇ ವಯಸ್ಸಿನಲ್ಲಿ

D:-ಮೊದಲ ಡೋಸ್ - ಜನನದ ಅನಂತರ ತಕ್ಷಣದಲ್ಲಿ
ಎರಡನೇ ಡೋಸ್ - 6-9 ತಿಂಗಳುಗಳಲ್ಲಿ
ಮೂರನೇ ಡೋಸ್ - 5 ವರ್ಷಗಳಲ್ಲಿ

ಬೂಸ್ಟರ್ ಡೋಸ್ - 10ನೇ ವಯಸ್ಸಿನಲ್ಲಿ

Correct Answer:- Option-A

Question3:-ದಡಾರ ಲಸಿಕೆಯನ್ನು ಯಾವಾಗ ನೀಡಬೇಕು ?

A:-6 ತಿಂಗಳಲ್ಲಿ

B:-ಜನನದ ಅನಂತರ ತಕ್ಷಣದಲ್ಲಿ

C:-9 ತಿಂಗಳು ಮತ್ತು 1 ವರ್ಷದ ನಡುವೆ

D:-1 ವರ್ಷ ಮತ್ತು 2 ವರ್ಷಗಳ ನಡುವೆ

Correct Answer:- Option-C

Question4:-ಕ್ಷೇತ್ರ ಪ್ರವಾಸಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಕೆಳಗೆ ನೀಡಲಾಗಿದೆ.
1. ಸಂಗ್ರಹಿಸಿದ ಸಾಮಾಗ್ರಿಗಳನ್ನು ತರಗತಿಯಲ್ಲಿ ಕ್ರಮವಾಗಿ ಸಂಘಟಿಸುವುದು
2. ಮಕ್ಕಳೊಂದಿಗೆ ಸಂಭಾಷಣೆ
3. ಮಕ್ಕಳ ಅನುಭವಗಳನ್ನು ಹಂಚಿಕೊಳ್ಳುವುದು
ಇದು ಕ್ಷೇತ್ರ ಪ್ರವಾಸದ ಯಾವ ಹಂತವಾಗಿದೆ ?

A:-ಯೋಜನೆ

B:-ಅನುಷ್ಠಾನ

C:-ವರದಿ ಮಾಡುವಿಕೆ ಮತ್ತು ಮೌಲ್ಯಮಾಪನ

D:-ಮೇಲಿನ ಯಾವುದೂ ಅಲ್ಲ

Correct Answer:- Option-C

Question5:-ಮಕ್ಕಳಿಗೆ ಆಟವಾಡಲು ಅವಕಾಶ ಕೊಟ್ಟರೆ ಬಟ್ಟೆಗಳಿಗೆ ಮಣ್ಣು ತಾಗುತ್ತದೆ, ಬಿದ್ದು ಅವರ ದೇಹಕ್ಕೆ ಗಾಯಗಳಾಗುತ್ತವೆ ಮತ್ತು ಅವರ ಕೈ ಕಾಲುಗಳು ಮುರಿಯುತ್ತವೆ ಎಂದು ಹೇಳುತ್ತಾ ತಮ್ಮ ಮಕ್ಕಳನ್ನು ಆಟವಾಡುವುದನ್ನು ನಿರಾಕರಿಸುವ ಪೋಷಕರು ಮತ್ತು ಶಿಕ್ಷಕರು ಇದ್ದಾರೆ. ಅಂತಹ ಅಭ್ಯಾಸಗಳನ್ನು ಮುಂದುವರಿಸಲು ಕಾರಣಗಳೇನು ?
1. ಮಕ್ಕಳ ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಿಸಿದ ಮೂಲಭೂತ ತಿಳುವಳಿಕೆಯ ಕೊರತೆ
2. ನರ್ಸರಿ ಮಕ್ಕಳಿಗೆ ನೀಡಬಹುದಾದ ಆಟಗಳ ಬಗೆಗಿನ ತಿಳುವಳಿಕೆಯ ಕೊರತೆ
3. ನರ್ಸರಿ ಮಕ್ಕಳು ಎಲ್ಲಿ ಆಡಬಹುದು ಎಂಬುದರ ಬಗೆಗಿನ ತಿಳುವಳಿಕೆಯ ಕೊರತೆ
4. ಮಕ್ಕಳಿಗೆ ಆಟಗಳನ್ನು ನೀಡುವಾಗ ಶಿಕ್ಷಕರ ಭಾಗವಹಿಸುವಿಕೆಯ ಬಗೆಗಿನ ತಿಳುವಳಿಕೆಯ ಕೊರತೆ
5. ವಿಶ್ರಾಂತಿ ಮತ್ತು ನಿದ್ರೆಯ ವಿಷಯದಲ್ಲಿ ಶಿಕ್ಷಕರು ಯಾವುದಕ್ಕೆ ಗಮನ ಕೊಡಬೇಕು ಎಂಬುದರ ಬಗೆಗಿನ ತಿಳುವಳಿಕೆಯ ಕೊರತೆ

A:-1, 2, 4 ಮತ್ತು 5

B:-1, 2, 3 ಮತ್ತು 5

C:-1, 2, 3 ಮತ್ತು 4

D:-ಮೇಲಿನ ಎಲ್ಲವೂ

Correct Answer:- Option-C

Question6:-ಆರು ವರ್ಷಗಳನ್ನು ಪೂರೈಸಿದ ಒಂದು ಹುಡುಗಿಯ ಸರಾಸರಿ ಎತ್ತರ ಮತ್ತು ತೂಕ ಎಷ್ಟು ?

A:-20 ಕೆ.ಜಿ. ತೂಕ 117 ಸೆಂ.ಮೀ. ಎತ್ತರ

B:-20.3 ಕೆ.ಜಿ. ತೂಕ 115.4 ಸೆಂ.ಮೀ. ಎತ್ತರ

C:-21.4 ಕೆ.ಜಿ. ತೂಕ 117.3 ಸೆಂ.ಮೀ. ಎತ್ತರ

D:-21.3 ಕೆ.ಜಿ. ತೂಕ 117.4 ಸೆಂ.ಮೀ. ಎತ್ತರ

Correct Answer:- Option-C

Question7:-ಹುಡುಗಿಯರ ಸೊಂಟದ ಮೂಳೆಗಳು ಯಾವ ವಯಸ್ಸಿನಲ್ಲಿ ಪೂರ್ಣ ಬೆಳವಣಿಗೆಯನ್ನು ಹೊಂದುತ್ತವೆ ?

A:-18-20 ವರ್ಷಗಳು

B:-21-22 ವರ್ಷಗಳು

C:-23-24 ವರ್ಷಗಳು

D:-ಮೇಲಿನ ಯಾವುದೂ ಅಲ್ಲ

Correct Answer:- Option-B

Question8:-1. ಕೌಟುಂಬಿಕ ಕಲಹಗಳು
2. ಗಲಭೆಗಳು
3. ಮಹಿಳೆಯರ ಮೇಲಿನ ಹಿಂಸೆ
4. ಆತ್ಮಹತ್ಯೆ
5. ಹೆಚ್ಚುತ್ತಿರುವ ಮಾನಸಿಕ ಅಸ್ವಸ್ಥರು
ಇದಕ್ಕೆ ಈ ಕೆಳಗಿನವುಗಳಲ್ಲಿ ಯಾವುದು ಕಾರಣವಲ್ಲ ?

A:-ಮಾನಸಿಕ ಆರೋಗ್ಯ

B:-ದೈಹಿಕ ಆರೋಗ್ಯ

C:-ಭಾವನಾತ್ಮಕ ಆರೋಗ್ಯ

D:-ಸಾಮಾಜಿಕ ಆರೋಗ್ಯ

Correct Answer:- Option-B

Question9:-WHO ನೀಡಿದ ಆರೋಗ್ಯದ ಬಗೆ ವ್ಯಾಖ್ಯಾನವೇನು ?

A:-ಆರೋಗ್ಯ ಎಂದರೆ ಸಂಪೂರ್ಣ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮದ ಸ್ಥಿತಿ, ಕೇವಲ ರೋಗ ಅಥವಾ ದೌರ್ಬಲ್ಯದ ಅನುಪಸ್ಥಿತಿಯಲ್ಲ

B:-ಆರೋಗ್ಯ ಎಂದರೆ ಎಲ್ಲರಿಗೂ ಆರೋಗ್ಯ ಸೇವೆಗಳಿಗೆ ಸಮಾನ ಲಭ್ಯ ಮಾರ್ಗದ ಮೂಲಕ ಸಾಧಿಸಬಹುದಾದ ಆರೋಗ್ಯದ ಹಕ್ಕು

C:-ಆರೋಗ್ಯ ಎಂದರೆ ಪೋಷಣೆಯಿಂದ ಪರಿಸರದವರೆಗಿನ ದೈಹಿಕ ಮತ್ತು ಸಾಮಾಜಿಕ ಯೋಗಕ್ಷೇಮದ ಸ್ಥಿತಿ

D:-ಇವುಗಳಲ್ಲಿ ಯಾವುದೂ ಅಲ್ಲ

Correct Answer:- Option-A

Question10:-ದೈಹಿಕ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಅಂಶಗಳು ಯಾವುವು ?
1. ಪರಂಪರೆ

2. ಅನುಚಿತ ಪೋಷಣೆ
3. ವಾಯು ಮಾಲಿನ್ಯ
4. ಪರಿಸರ

A:-1, 2, 3 ಮತ್ತು 4

B:-2 ಮತ್ತು 3

C:-1 ಮತ್ತು 4

D:-2, 3 ಮತ್ತು4

Correct Answer:- Option-B

Question11:-ರಾಜ್ಯದಲ್ಲಿ ನರ್ಸರಿ ಶಾಲೆಗಳು ಮತ್ತು ಬಾಲವಾಡಿಗಳು ಯಾವ ಏಜೆನ್ಸಿಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತವೆ ?

A:-ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ

B:-ಪರಿಶಿಷ್ಟ ಜಾತಿ ಕಲ್ಯಾಣ ಇಲಾಖೆ

C:-ಗ್ರಾಮೀಣಾಭಿವೃದ್ಧಿ ಇಲಾಖೆ

D:-ಮೇಲಿನ ಎಲ್ಲವೂ

Correct Answer:- Option-D

Question12:-ಬಾಲ ಕಾರ್ಮಿಕ ಕಾಯ್ದೆ (ನಿಷೇಧ ಮತ್ತು ನಿಯಮಗಳು) ಯಾವ ವರ್ಷದಲ್ಲಿ ಜಾರಿಗೆ ಬಂದಿತು ?

A:-1992

B:-1986

C:-1966

D:-ಇವುಗಳಲ್ಲಿ ಯಾವುದೂ ಅಲ್ಲ

Correct Answer:- Option-B

Question13:-5 ರಿಂದ 12 ವರ್ಷದೊಳಗಿನ ಮಕ್ಕಳಿಗೆ ಶಿಕ್ಷೆಯಿಲ್ಲದೆ ಸಂವೇದನಶೀಲ ತರಬೇತಿ, ದೈಹಿಕ ಶಿಕ್ಷಣ ಮತ್ತು ಬೌದ್ಧಿಕ ತರಬೇತಿಯನ್ನು ನೀಡಬೇಕು- ಇವು ಯಾರ ಶೈಕ್ಷಣಿಕ ವಿಚಾರಗಳು ?

A:-ತಾರಾಬಾಯಿ ಮೋಡಕ್

B:-ಫ್ರೋಬೆಲ್

C:-ಪೌಲೊ ಫ್ರೈರ್

D:-ರೂಸೋ

Correct Answer:- Option-D

Question14:-ಜ್ಞಾತದಿಂದ ಅಜ್ಞಾತಕ್ಕೆ, ಸುಲಭದಿಂದ ಕಷ್ಟಕ್ಕೆ, ಸಾಮಾನ್ಯದಿಂದ ನಿರ್ದಿಷ್ಟಕ್ಕೆ ಇಂತಹ ಬೋಧನಾ ವಿಧಾನಗಳಿಗೆ ಕಾರಣರಾದ ಚಿಂತಕರು ಯಾರು ?

A:-ಪೆಸ್ಟಲೋಝಿ

B:-ಜಾನ್ ಡ್ಯೂಯಿ

C:-ಜಾನ್ ಅಮೋಸ್ ಕೊಮೆನಿಯಸ್

D:-ವಿವೇಕಾನಂದ

Correct Answer:- Option-C

Question15:-"Rights of Man, The Rights of Children" ಬರೆದವರು ಯಾರು ?

A:-ರವೀಂದ್ರನಾಥ ಠಾಗೋರ್

B:-ಮರಿಯಾ ಮಾಂಟೆಸ್ಸರಿ

C:-ಫ್ರೋಬೆಲ್

D:-ರೂಸೋ

Correct Answer:- Option-D

Question16:-ಈ ಕೆಳಗಿನವುಗಳಲ್ಲಿ ಸರಿಯಾದ ಪಟ್ಟಿ ಯಾವುದು ?

A:-ಸಂಪೂರ್ಣತೆಯ ಅಭಿವ್ಯಕ್ತಿ - ಠಾಗೋರ್
ಸಾರ್ವತ್ರಿಕತೆ ಮತ್ತು ಮಾನವೀಯತೆ - ವಿವೇಕಾನಂದ
ಸಮಸ್ಯಾತ್ಮಕ ಶಿಕ್ಷಣ - ಪೌಲೋ ಫ್ರೀರ್
ನರ್ಸರಿ ಶಾಲೆ - ಮ್ಯಾಗ್ಮಿಲನ್ ಸಹೋದರಿಯರು

B:-ಸಂಪೂರ್ಣತೆಯ ಅಭಿವ್ಯಕ್ತಿ - ವಿವೇಕಾನಂದ
ಸಾರ್ವತ್ರಿಕತೆ ಮತ್ತು ಮಾನವೀಯತೆ - ಠಾಗೋರ್
ಸಮಸ್ಯಾತ್ಮಕ ಶಿಕ್ಷಣ - ಮ್ಯಾಗ್ಮಿಲನ್ ಸಹೋದರಿಯರು
ನರ್ಸರಿ ಶಾಲೆ - ಪೌಲೋ ಫ್ರೀರ್

C:-ಸಂಪೂರ್ಣತೆಯ ಅಭಿವ್ಯಕ್ತಿ - ವಿವೇಕಾನಂದ
ಸಾರ್ವತ್ರಿಕತೆ ಮತ್ತು ಮಾನವೀಯತೆ - ಠಾಗೋರ್
ಸಮಸ್ಯಾತ್ಮಕ ಶಿಕ್ಷಣ - ಪೌಲೋ ಫ್ರೀರ್
ನರ್ಸರಿ ಶಾಲೆ - ಮ್ಯಾಗ್ಮಿಲನ್ ಸಹೋದರಿಯರು

D:-ಸಂಪೂರ್ಣತೆಯ ಅಭಿವ್ಯಕ್ತಿ - ವಿವೇಕಾನಂದ
ಸಾರ್ವತ್ರಿಕತೆ ಮತ್ತು ಮಾನವೀಯತೆ - ಮ್ಯಾಗ್ಮಿಲನ್ ಸಹೋದರಿಯರು
ಸಮಸ್ಯಾತ್ಮಕ ಶಿಕ್ಷಣ - ಪೌಲೋ ಫ್ರೀರ್
ನರ್ಸರಿ ಶಾಲೆ - ಠಾಗೋರ್

Correct Answer:- Option-C

Question17:-"ಸಮಾಜ ಮತ್ತು ವ್ಯಕ್ತಿಗೆ ಪ್ರಯೋಜನಕಾರಿಯಾದ ಜೀವನವನ್ನು ನಡೆಸಲು ಕೌಶಲ್ಯಗಳನ್ನು ಸಂಪಾದಿಸುವುದು ಅಗತ್ಯವಾಗಿದೆ. ಆದುದರಿಂದ, ನಿರ್ದಿಷ್ಟ ಗುರಿಗಳನ್ನು ಮುಂಚಿತವಾಗಿ ನಿರ್ಧರಿಸುವುದು ವೈಜ್ಞಾನಿಕತೆಯಲ್ಲ."

A:-ಮಾನವತಾವಾದ

B:-ವಾಸ್ತವಿಕವಾದ

C:-ನೈಸರ್ಗಿಕವಾದ

D:-ಆದರ್ಶವಾದ

Correct Answer:- Option-B

Question18:-ಪೂರ್ವ-ಪ್ರಾಥಮಿಕ ಶಿಕ್ಷಣದ ಉದ್ದೇಶಗಳಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಸೇರಿಸಲಾಗಿಲ್ಲ ?
1. ಸಮಗ್ರ ಅಭಿವೃದ್ಧಿ
2. ಸಾಮಾಜಿಕ ಅಭಿವೃದ್ಧಿ
3. ಭಾಷಾ ಅಭಿವೃದ್ಧಿ
4. ಸೌಂದರ್ಯ ಮೆಚ್ಚುಗೆಯ ಅಭಿವೃದ್ಧಿ
5. ಕೌಶಲ್ಯ ಅಭಿವೃದ್ಧಿ
6. ಕಲಾತ್ಮಕ ಮೆಚ್ಚುಗೆಯ ಅಭಿವೃದ್ಧಿ
7. ಭಾವನಾತ್ಮಕ ಅಭಿವೃದ್ಧಿ
8. ಅರಿವಿನ ಅಭಿವೃದ್ಧಿ
9. ದೈಹಿಕ ಚಾಲನೆಯ ಅಭಿವೃದ್ಧಿ

A:-ಕಲಾತ್ಮಕ ಮೆಚ್ಚುಗೆಯ ಅಭಿವೃದ್ಧಿ

B:-ಸಾಮಾಜಿಕ ಅಭಿವೃದ್ಧಿ

C:-ಭಾವನಾತ್ಮಕ ಅಭಿವೃದ್ಧಿ

D:-ಕೌಶಲ್ಯ ಅಭಿವೃದ್ಧಿ

Correct Answer:- Option-D

Question19:-ತಯಾರಿಸುವ ಕಲಿಕೆಯ ಚಟುವಟಿಕೆಯ ಭಾಗವಾಗಿ,
1. ಬಣ್ಣದ ಕಾಗದದ ಅಗತ್ಯ ತುಣುಕುಗಳನ್ನು ಆಯ್ಕೆ ಮಾಡುವುದು
2. ಅಂಟನ್ನು ಲೇಪಿಸುವುದು
3. ಅಂಟಿಸುವುದು
ಈ ಚಟುವಟಿಕೆಗಳಲ್ಲಿ ತೊಡಗಿರುವ ಮಗುವಿನಲ್ಲಿ ಯಾವ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ ?

A:-ಸೂಕ್ಷ್ಮ ಸ್ನಾಯು ಅಭಿವೃದ್ಧಿ

B:-ಸ್ಥೂಲ ಸ್ನಾಯು ಅಭಿವೃದ್ಧಿ

C:-ಕಲಾತ್ಮಕ ಮೆಚ್ಚುಗೆಯ ಕೌಶಲ್ಯಗಳ ಅಭಿವೃದ್ಧಿ

D:-ಮೇಲಿನ ಯಾವುದೂ ಅಲ್ಲ

Correct Answer:- Option-A

Question20:-"ಪರಿಸರದ ಪರಿಣಾಮಕಾರಿ ಬಳಕೆಗಾಗಿ ವ್ಯಕ್ತಿಯಲ್ಲಿನ ಎಲ್ಲಾ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವುದು ಶಿಕ್ಷಣದ ಉದ್ದೇಶವಾಗಿದೆ" - ಇದು ಯಾರ ವ್ಯಾಖ್ಯಾನ ?

A:-ಜಾನ್ ಡ್ಯೂಯಿ

B:-ಗಾಂಧೀಜಿ

C:-ಅರಬಿಂದೋ

D:-ಪೌಲೋ ಫ್ರೀರ್

Correct Answer:- Option-A

Question21:-ವಿಕಲಚೇತನರಿಗೆ ಆಹಾರ, ಆರೈಕೆ, ನೆರವು ಮತ್ತು ಅನಾಥರಿಗೆ ಬೆಂಬಲ ಮತ್ತು ಸಹಾಯವನ್ನು ಯಾವ ಘೋಷಣೆ ಖಚಿತಪಡಿಸುತ್ತದೆ ?

A:-1959 ರ ಮಕ್ಕಳ ಹಕ್ಕುಗಳ ಘೋಷಣೆ

B:-20 ನವೆಂಬರ್ 1989 ರಂದು ಯು ಎನ್ ಜನರಲ್ ಅಸೆಂಬ್ಲಿಯು ಅಂಗೀಕರಿಸಿದ ಮಕ್ಕಳ ಹಕ್ಕುಗಳ ವಿಶೇಷ ಸಮಾವೇಶದ ಘೋಷಣೆ

C:-ಚೈಲ್ಡ್ ಲೀಗ್ ಆಫ್ ನೇಷನ್ಸ್ ಹಕ್ಕುಗಳ ಕುರಿತು 1924ರ ಜಿನೀವಾ ಘೋಷಣೆ

D:-ಇವುಗಳಲ್ಲಿ ಯಾವುದೂ ಅಲ್ಲ

Correct Answer:- Option-C

Question22:-ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸುಳ್ಳು ?

1. ಜಾತಿ, ಧರ್ಮ, ವರ್ಗ, ಜನ್ಮಸ್ಥಳದ ಆಧಾರದ ಮೇಲೆ ಭಾರತೀಯ ನಾಗರಿಕರಲ್ಲಿ ಯಾವುದೇ ತಾರತಮ್ಯ ಇರಬಾರದು - ವಿಧಿ 15

2. ಕಾನೂನಿನ ಮುಂದೆ ಎಲ್ಲರೂ ಸಮಾನರು - ವಿಧಿ 14

3. ಅಲ್ಪ ಸಂಖ್ಯಾತರು ಮತ್ತು ಅನಾನುಕೂಲಕರ ಸಮುದಾಯಗಳ ಶೈಕ್ಷಣಿಕ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಮತ್ತು ಸುಧಾರಿಸಲು ರಾಜ್ಯವು ಎಲ್ಲಾ ಪ್ರಯತ್ನಗಳನ್ನು ಮಾಡಲು ಇದು ಅವಕಾಶ ನೀಡುತ್ತದೆ - ವಿಧಿ 46

4. ಆರ್ಥಿಕ ಸಾಮರ್ಥ್ಯ ಮತ್ತು ಅಭಿವೃದ್ಧಿ ಸಾಮರ್ಥ್ಯದ ಮಿತಿಯೊಳಗೆ ರಾಜ್ಯವು ಎಲ್ಲಾ ನಾಗರಿಕರಿಗೆ ಶೈಕ್ಷಣಿಕ ಸೌಲಭ್ಯಗಳನ್ನು ಖಚಿತಪಡಿಸಿಕೊಳ್ಳಬೇಕು - ವಿಧಿ 43

5. ಸಂವಿಧಾನ ಜಾರಿಗೆ ಬಂದ 10 ವರ್ಷಗಳ ಒಳಗೆ, 14 ವರ್ಷ ತುಂಬುವವರೆಗೆ ಭಾರತದಲ್ಲಿ ಜನಿಸಿದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಇದು ಒದಗಿಸುತ್ತದೆ - ವಿಧಿ 45

A:-1

B:-2

C:-3

D:-4

Correct Answer:- Option-D

Question23:-ಈ ಕೆಳಗಿನವುಗಳಲ್ಲಿ ಯಾವುದನ್ನು ಸಂಸ್ಕೃತಿಯ ವ್ಯಾಖ್ಯಾನದಲ್ಲಿ ಸೇರಿಸಲಾಗಿಲ್ಲ ?

1. ನಾವು ಹೇಗಿದ್ದೇವೆಯೋ ಅದೇ ಸಂಸ್ಕೃತಿ.

2. ಸಂಸ್ಕೃತಿಯು ಒಂದು ನಿರ್ದಿಷ್ಟ ಸಮಾಜದ ಸದಸ್ಯರು ಅಳವಡಿಸಿಕೊಂಡ ನಡವಳಿಕೆಗಳ ರೂಪ ಮತ್ತು ಫಲಿತಾಂಶವಾಗಿದ್ದು, ಅನಂತರದ ಪೀಳಿಗೆಗೆ ಮುಂದುವರಿಯುತ್ತದೆ.

3. ಸಂಸ್ಕೃತಿ ಎಂದರೆ ಸಹಜ ಪ್ರವೃತ್ತಿಯ ನಡವಳಿಕೆಗಳು.

4. ಸಂಸ್ಕೃತಿ ಎಂದರೆ ಬುದ್ಧಿಶಕ್ತಿ ಮತ್ತು ಅನುಭವದ ಮೂಲಕ ಕಲಿಯುವ ನಡವಳಿಕೆಯ ಮಾದರಿ.

A:-1

B:-2

C:-3

D:-4

Correct Answer:- Option-D

Question24:-ಈ ಕೆಳಗಿನವುಗಳಲ್ಲಿ ಯಾವುದು ಶಾಲಾಪೂರ್ವ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವ ಸಂಸ್ಥೆಗಳಲ್ಲಿಲ್ಲ ?

A:-ಐಸಿಡಿಎಸ್

B:-ಶಿಕ್ಷಣ ಇಲಾಖೆ

C:-ಪೂರ್ವ ಪ್ರಾಥಮಿಕ ಶಾಲೆಗಳು

D:-ಸ್ಥಳೀಯ ಸರ್ಕಾರಿ ಸಂಸ್ಥೆಗಳು

Correct Answer:- Option-C

Question25:-ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಪಟ್ಟಿಯಾಗಿದೆ ?

A:-CARE - ಸ್ವಯಂಸೇವಾ ಸಂಸ್ಥೆ
CSWB - ರಾಷ್ಟ್ರೀಯ ಸಂಸ್ಥೆ
BSS - ಅಂತಾರಾಷ್ಟ್ರೀಯ ಸಂಸ್ಥೆ
ಮೂರು ಹಂತದ ಪಂಚಾಯತ್ - ಸ್ಥಳೀಯ ಸ್ವ-ಸರ್ಕಾರ ಸಂಸ್ಥೆಗಳು

B:-CARE - ಅಂತಾರಾಷ್ಟ್ರೀಯ ಸಂಸ್ಥೆ
CSWB - ಸ್ವಯಂಸೇವಾ ಸಂಸ್ಥೆ
BSS - ರಾಷ್ಟ್ರೀಯ ಸಂಸ್ಥೆ
ಮೂರು ಹಂತದ ಪಂಚಾಯತ್ - ಸ್ಥಳೀಯ ಸ್ವ-ಸರ್ಕಾರ ಸಂಸ್ಥೆಗಳು

C:-CARE - ಅಂತಾರಾಷ್ಟ್ರೀಯ ಸಂಸ್ಥೆ
CSWB - ರಾಷ್ಟ್ರೀಯ ಸಂಸ್ಥೆ
BSS - ಸ್ವಯಂಸೇವಾ ಸಂಸ್ಥೆ
ಮೂರು ಹಂತದ ಪಂಚಾಯತ್ - ಸ್ಥಳೀಯ ಸ್ವ-ಸರ್ಕಾರ ಸಂಸ್ಥೆಗಳು

D:-CARE - ರಾಷ್ಟ್ರೀಯ ಸಂಸ್ಥೆ
CSWB - ಸ್ವಯಂಸೇವಾ ಸಂಸ್ಥೆ
BSS - ಅಂತಾರಾಷ್ಟ್ರೀಯ ಸಂಸ್ಥೆ
ಮೂರು ಹಂತದ ಪಂಚಾಯತ್ - ಸ್ಥಳೀಯ ಸ್ವ-ಸರ್ಕಾರ ಸಂಸ್ಥೆಗಳು

Correct Answer:- Option-C

Question26:-ಈ ಕೆಳಗಿನವುಗಳಲ್ಲಿ ಅಂಗನವಾಡಿಗಳು ಒದಗಿಸುವ ಸೇವೆಗಳಲ್ಲಿ ಯಾವುದು ಸೇರಿಲ್ಲ ?

1. ಅನೌಪಚಾರಿಕ ಶಾಲಾಪೂರ್ವ ಶಿಕ್ಷಣ.
2. ಆರೋಗ್ಯ ತಪಾಸಣೆ.
3. ಪೌಷ್ಟಿಕಾಂಶ ಕಾರ್ಯಕ್ರಮಗಳು.
4. ಕಾರ್ಯಾಗಾರಗಳು ಮತ್ತು ತರಬೇತಿ.
5. ರೋಗನಿರೋಧಕತಾ ಸ್ಥಿತಿ.

A:-5

B:-4

C:-3

D:-2

Correct Answer:- Option-B

Question27:-ಈ ಕೆಳಗಿನವುಗಳು ಯಾವ ಸೇವಾ ಸಂಸ್ಥೆಯ ಕಾರ್ಯಗಳಾಗಿದೆ ?

1. ಮಕ್ಕಳ ಕಲ್ಯಾಣಕ್ಕಾಗಿ ಕಾನೂನುಗಳನ್ನು ರೂಪಿಸುವುದು.
2. ಸಮಾಜಕಲ್ಯಾಣ ಮಂಡಳಿಗಳ ಕಾರ್ಯನಿರ್ವಹಣೆಯನ್ನು ಬಲಪಡಿಸುವುದು.
3. ವಿಕಲಚೇತನ ಮಕ್ಕಳ ಕಲ್ಯಾಣಕ್ಕಾಗಿ ಕೆಲಸ ಮಾಡುವುದು.
4. ಬಾಲಾಪರಾಧಗಳಿಗೆ ಪರಿಹಾರಗಳನ್ನು ಕಂಡುಹಿಡಿಯುವುದು.
5. ಕಲ್ಯಾಣ ಚಟುವಟಿಕೆಗಳನ್ನು ಮೌಲ್ಯಮಾಪನ ಮಾಡುವುದು.
6. ಮಕ್ಕಳನ್ನು ದತ್ತು ಪಡೆಯುವುದು ಮತ್ತು ಆರೈಕೆ ಮಾಡುವುದು.
7. ಧೈರ್ಯವನ್ನು ಗುರುತಿಸುವ ಚಟುವಟಿಕೆಗಳನ್ನು ಕಾರ್ಯಗತಗೊಳಿಸುವುದು.

A:-NCTE

B:-ICCW

C:-NCERT

D:-NI EPA

Correct Answer:- Option-B

Question28:-ಜಿನೀವಾದಲ್ಲಿ ಹೆನ್ರಿ ಡ್ಯೂನಾಂಟ್ ಯಾವ ಸಂಸ್ಥೆಯನ್ನು ಸ್ಥಾಪಿಸಿದರು ?

A:-CARE

B:-UNICEF

C:-BSS

D:-ರೆಡ್ ಕ್ರಾಸ್

Correct Answer:- Option-D

Question29:-ನರ್ಸರಿ ಶಾಲಾ ಶಿಕ್ಷಕರಿಗೆ ತರಬೇತಿ ನೀಡುವುದು, ನರ್ಸರಿಗಳಲ್ಲಿ ಮಧ್ಯಾಹ್ನದ ಊಟ ಒದಗಿಸುವುದು, ಗರ್ಭಿಣಿಯರು ಮತ್ತು ಮಕ್ಕಳಿಗೆ ಪೌಷ್ಟಿಕಾಂಶ ಒದಗಿಸುವುದು, ಕುಟುಂಬ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಮತ್ತು ಕೆಳ ಮಧ್ಯಮ ವರ್ಗದವರಿದೆ ಸ್ವ-ಉದ್ಯೋಗಕ್ಕಾಗಿ ಸೌಲಭ್ಯಗಳನ್ನು ಒದಗಿಸುವುದು - ಇವು ಯಾವ ಸಂಸ್ಥೆಯ ಕಾರ್ಯಗಳು ?

A:-WHO

B:-BSS

C:-UNICEF

D:-ಮೇಲಿನ ಯಾವುದೂ ಅಲ್ಲ

Correct Answer:- Option-B

Question30:-ಅಂಗನವಾಡಿಗಳ ಸಂಖ್ಯೆಯನ್ನು ನಿರ್ಧರಿಸಲು ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ವಿಧಾನ ?

A:-500 ಜನರಿಗೆ ಒಂದು ಅಂಗನವಾಡಿ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ 300 ಜನರಿಗೆ ಒಂದು ಅಂಗನವಾಡಿ

B:-1000 ಜನರಿಗೆ ಒಂದು ಅಂಗನವಾಡಿ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ 500 ಜನರಿಗೆ ಒಂದು ಅಂಗನವಾಡಿ

C:-1000 ಜನರಿಗೆ ಒಂದು ಅಂಗನವಾಡಿ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ 700 ಜನರಿಗೆ ಒಂದು ಅಂಗನವಾಡಿ

D:-ಮೇಲಿನ ಯಾವುದೂ ಅಲ್ಲ

Correct Answer:- Option-C

Question31:-ಈ ಕೆಳಗಿನ ಸಾಧನಗಳನ್ನು ಬಳಸಿಕೊಂಡು ಯಾವ ಪ್ರಕಾರದ ಕಲಿಕಾರ್ಥಿಯ ಪ್ರವೇಶ ಸ್ಥಿತಿಯನ್ನು ನಿರ್ಧರಿಸಲಾಗುತ್ತದೆ ?

i) ಮಗುವಿನ ವೈಯಕ್ತಿಕ ಮಾಹಿತಿ.

ii) ಮಗುವಿನ ಆರೋಗ್ಯದ ಬಗೆಗಿನ ವರದಿ.

iii) ಮಗುವಿನ ದೈಹಿಕ ಮತ್ತು ಬೌದ್ಧಿಕ ಸವಾಲುಗಳ ಮಟ್ಟ.

iv) ನಿರ್ದಿಷ್ಟ ತರಗತಿಗೆ ಅಗತ್ಯವಿರುವ ಪೂರ್ವಾಪೇಕ್ಷಿತಗಳ ಬಗೆಗಿನ ವರದಿ.

A:-ಬೌದ್ಧಿಕ ಸವಾಲುಗಳನ್ನು ಹೊಂದಿರುವ ಮಗು

B:-ಶಾಲೆ ಬಿಟ್ಟ ಅನಂತರ ಮತ್ತೆ ಸೇರಿಸಿಕೊಳ್ಳಲಾದ ಮಗು

C:-ವಲಸೆ ಕಾರ್ಮಿಕರ ಮಗು

D:-ಅನಾರೋಗ್ಯದ ಕಾರಣ ತೆಗೆದುಹಾಕಲಾದ ಮಗು

Correct Answer:- Option-A

Question32:-ಪ್ರಿಸ್ಕೂಲ್ ತರಗತಿಯಲ್ಲಿ ಗಣಿತ ಸಂವಹನವನ್ನು ಸುಧಾರಿಸಲು ಬಳಸಬಹುದಾದ ವಿಧಾನಗಳಲ್ಲಿ, ಈ ಕೆಳಗಿನವುಗಳು ಸ್ವೀಕಾರಾರ್ಹವಾಗಿವೆ :

i) ಮಗುವಿನ ಮನೆ ಭಾಷೆಗೆ ಸಂಬಂಧಿಸಿದ ಸರಳ ಭಾಷೆ.

ii) ಪರಿಕಲ್ಪನೆಗಳು, ಚಿಹ್ನೆಗಳು ಮತ್ತು ಚಿಹ್ನೆಗಳನ್ನು ಪ್ರಸ್ತುತಪಡಿಸುವಾಗ ಗಣಿತದ ಭಾಷೆಯನ್ನು ಮಾತ್ರ ಬಳಸುವುದು.

iii) ಗುಂಪಿನ ಸಂದರ್ಭಕ್ಕೆ ಸಂಬಂಧಿಸಿದ ಒತ್ತಡ-ಮುಕ್ತ ಮತ್ತು ಸ್ನೇಹಪರ ಅಭಿವ್ಯಕ್ತಿಗಳನ್ನು ಬಳಸುವುದು.

iv) ಗುಣಾಕಾರ ಕೋಷ್ಟಕಗಳು ಮತ್ತು ಚಾರ್ಟ್ ಗಳನ್ನು ಬಾಯಿಪಾಠಮಾಡಿಕೊಳ್ಳುವುದು.

A:-i, ii ಮತ್ತು iii

B:-ii ಮತ್ತು iv

C:-ii ಮತ್ತು iii

D:-i ಮತ್ತು iii

Correct Answer:- Option-D

Question33:-ಈ ಕೆಳಗಿನವುಗಳಲ್ಲಿ ಯಾವುದು ಅನ್ವಯಿಕ ಮನೋವಿಜ್ಞಾನದ ಶಾಖೆಯಲ್ಲ ?

A:-ಸಾಮಾಜಿಕ ಮನೋವಿಜ್ಞಾನ

B:-ಶೈಕ್ಷಣಿಕ ಮನೋವಿಜ್ಞಾನ

C:-ಅರಿವಿನ ಮನೋವಿಜ್ಞಾನ

D:-ವೈದ್ಯಕೀಯ (ಚಿಕಿತ್ಸಾ) ಮನೋವಿಜ್ಞಾನ

Correct Answer:- Option-C

Question34:-ಪರಿವೀಕ್ಷಣಾ ವಿಧಾನದಲ್ಲಿ ಈ ಕೆಳಗಿನವುಗಳನ್ನು ಸಮಸ್ಯೆ ಎಂದು ಪರಿಗಣಿಸಬಹುದು.

i) ಹೆಚ್ಚಿನ ವಿಶ್ವಾಸಾರ್ಹತೆ

ii) ಪಕ್ಷಪಾತ

iii) ದಾಖಲಿಸುವಲ್ಲಿ ತೊಂದರೆ
iv) ವಸ್ತುನಿಷ್ಠ ದತ್ತಾಂಶದ ಲಭ್ಯತೆ

A:-ii ಮತ್ತು iv

B:-i ಮತ್ತು ii

C:-ii ಮತ್ತು iii

D:-iv ಮಾತ್ರ

Correct Answer:- Option-C

Question35:-ಸಮಾಜಶಾಸ್ತ್ರೀಯ ಪರೀಕ್ಷೆಗಳನ್ನು ನಡೆಸಲು ಅತ್ಯಂತ ಸೂಕ್ತವಾದ ಗುಂಪು

A:-ಅಂಗವಿಕಲರು

B:-ಸಹಕಾರಿ ಸಂಘಗಳು

C:-ಮಾತಿನ ದುರ್ಬಲತೆ (ವಾಕ್ ನ್ಯೂನತೆ) ಹೊಂದಿರುವ ಜನರು

D:-ವಿವಿಧ ವಯಸ್ಸಿನ ಗುಂಪುಗಳು

Correct Answer:- Option-B

Question36:-ಮಕ್ಕಳಲ್ಲಿ ವಿಚಾರಣೆಯನ್ನು ಪ್ರೋತ್ಸಾಹಿಸಲು

A:-ವ್ಯಂಗ್ಯ ಚಿತ್ರಗಳು ಮತ್ತು ಅನಿಮೇಷನ್ ಗಳನ್ನು ತೋರಿಸಿ

B:-ಉಪನ್ಯಾಸಗಳನ್ನು ಆಲಿಸಿ

C:-ಸ್ವತಃ ಎತ್ತಿಕೊಂಡು ಬಳಸಬಹುದಾದ ವಸ್ತುಗಳನ್ನು ಬಳಸಿ ಆಟಗಳನ್ನು ಆಡಿ

D:-ವರ್ಕ್ ಶೀಟ್ ಗಳನ್ನು (ಕಾರ್ಯ ಪಟ್ಟಿಗಳನ್ನು) ಬಳಸಿ

Correct Answer:- Option-C

Question37:-ವೈಯಕ್ತಿಕ ಸುರಕ್ಷತೆಯ ಬಗ್ಗೆ ಮಕ್ಕಳಿಗೆ ಮನವರಿಕೆ ಮಾಡಲು ಅತ್ಯಂತ ಸೂಕ್ತವಾದ ಮಾರ್ಗವೆಂದರೆ

A:-ಮಕ್ಕಳು ನೋಡಬಹುದಾದ ರೀತಿಯಲ್ಲಿ ನಿಯಮಗಳು ಮತ್ತು ನಿಯಮಗಳನ್ನು ಪ್ರದರ್ಶಿಸಿ

B:-ಪಾತ್ರಾಭಿನಯ

C:-ವೈಯಕ್ತಿಕ ನೈರ್ಮಲ್ಯ ಪರಿಶೀಲನಾ ಪಟ್ಟಿ

D:-ಮಕ್ಕಳ ನಡುವೆ ಚರ್ಚೆಯನ್ನು ಆಯೋಜಿಸಿ

Correct Answer:- Option-B

Question38:-ಮಗುವಿನ ಅನಿರೀಕ್ಷಿತ ಪ್ರತಿಕ್ರಿಯೆಗಳು ಮತ್ತು ವಿಶಿಷ್ಟ ನಡವಳಿಕೆಗಳನ್ನು ಇದನ್ನು ಉಪಯೋಗಿಸಿ ದಾಖಲಿಸಲಾಗುತ್ತದೆ.

A:-ಸಮೀಕ್ಷೆ

B:-ಸಂಚಿತ ದಾಖಲೆ

C:-ಸಮಾಜಲೇಖ

D:-ನಿರೂಪಣಾ ದಾಖಲೆ

Correct Answer:- Option-D

Question39:-
ಕೆಳಗೆ ನೀಡಲಾದ ರೇಟಿಂಗ್ ಸ್ಕೇಲ್‌ಅನ್ನು ಯಾವುದರ ಮಟ್ಟವನ್ನು ನಿರ್ಧರಿಸಲು ಉತ್ತಮವಾಗಿ ಬಳಸಲಾಗುತ್ತದೆ ?

| ಸಂ. | ಹೇಳಿಕೆ | ಒಪ್ಪುತ್ತೇನೆ | ಒಪ್ಪುವುದಿಲ್ಲ | ಖಡಾಖಂಡಿತವಾಗಿ ಒಪ್ಪುವುದಿಲ್ಲ |
|---|---|---|---|---|
| 1 | ನಾನು ತೃಪ್ತನಾಗಿದ್ದೇನೆ | | | |
| 2 | ನನ್ನಲ್ಲಿ ಅನೇಕ ಒಳ್ಳೆಯ ಗುಣಗಳಿವೆ | | | |
| 3 | ಕೆಲವೊಮ್ಮೆ ನಾನು ಯಾವುದರಲ್ಲೂ ನಿಷ್ಣಾತನಲ್ಲ ಎಂದು ನನಗೆ ಅನಿಸುತ್ತದೆ | | | |
| 4 | ನಾನು ನನ್ನ ಬಗ್ಗೆ ಉತ್ತಮ ಮನೋಭಾವವನ್ನು ಕಾಪಾಡಿಕೊಳ್ಳುತ್ತೇನೆ | | | |

A:-ಸ್ವಾಭಿಮಾನ

B:-ಹೊಂದಾಣಿಕೆ

C:-ಸ್ವಯಂ ಅರಿವು

D:-ಒತ್ತಡ

Correct Answer:- Option-A

Question40:-ಶೈಶವಾವಸ್ಥೆಯ ಬೆಳವಣಿಗೆಯ ಮೈಲಿಗಲ್ಲುಗಳು ಯಾವುವು ?

i) ಸರಿ ಮತ್ತು ತಪ್ಪುಗಳನ್ನು ಗುರುತಿಸುವುದು

ii) ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಕಲಿಯುವುದು

iii) ಸಾಮಾಜಿಕ ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳುವುದು

iv) ಲಿಂಗ ವ್ಯತ್ಯಾಸಗಳನ್ನು ಗುರುತಿಸುವುದು

v) ತೆವಳಲು, ನಿಲ್ಲಲು, ಓಡಲು ಮತ್ತು ನೆಗೆಯಲು ಪ್ರಯತ್ನಿಸುವುದು

A:-i ಮತ್ತು iii

B:-ii ಮತ್ತು v

C:-i ಮತ್ತು iv

D:-iii ಮತ್ತು iv

Correct Answer:- Option-B

Question41:-ಈ ಕೆಳಗಿನವುಗಳಲ್ಲಿ ಯಾವುದನ್ನು ಪ್ರಿಸ್ಕೂಲ್ ಮಗುವಿನ ನೈತಿಕ ಬೆಳವಣಿಗೆಯ ಹಂತವೆಂದು ಪರಿಗಣಿಸಬಹುದು ?

A:-ಅಸಂಗತತೆ

B:-ಸ್ವಾಯತ್ತತೆ

C:-ವೈವಿಧ್ಯತೆ

D:-ಆಕ್ಸಾನಮಿ (ನರತಂತು ಶಾಸ್ತ್ರ)

Correct Answer:- Option-A

Question42:-ಗರ್ಭಧಾರಣೆಯ ಎರಡನೇ ವಾರದ ಅಂತ್ಯದಿಂದ ಹತ್ತನೇ ವಾರದವರೆಗಿನ ಮಗುವಿನ ಬೆಳವಣಿಗೆಯ ಹಂತಕ್ಕೆ ಸಮರ್ಪಕವಾದ ಹೆಸರೇನು ?

A:-ಮೊಳಕೆಯೊಡೆಯುವ ಹಂತ

B:-ಸಂವೇದನಾ ಹಂತ

C:-ಭ್ರೂಣದ ಹಂತ

D:-ಗರ್ಭಾವಸ್ಥೆಯ ಹಂತ

Correct Answer:- Option-C

Question43:-ಮಗುವಿನ ಸೂಕ್ಷ್ಮ ಚಾಲಕ ಕೌಶಲ್ಯಗಳ ಬೆಳವಣಿಗೆಗೆ ಯಾವ ಚಟುವಟಿಕೆ ಸಹಾಯ ಮಾಡುತ್ತದೆ ?

A:-ಕಲ್ಲುಗಳನ್ನು ಎತ್ತಿಕೊಳ್ಳವುದು

B:-ಚಿತ್ರಗಳನ್ನು ಸಣ್ಣ ಭಾಗಗಳಾಗಿ ಬಣ್ಣ ಹಚ್ಚುವುದು

C:-ಕಥೆಗಳನ್ನು ಕೇಳುವುದು

D:-ಸಾಲಿನ ಉದ್ದಕ್ಕೂ ನಡೆಯುವುದು

Correct Answer:- Option-A

Question44:-ರಚನಾತ್ಮಕ ಚಿಂತನಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು

A:-ವಿವಿಧ ವಸ್ತುಗಳೊಂದಿಗೆ ಮುಕ್ತ ಆಟ

B:-ಘಟನೆಗಳಿಗೆ ಅನುಗುಣವಾಗಿ ಕಥೆ ಕಾರ್ಡ್ ಗಳನ್ನು ಜೋಡಿಸುವುದು

C:-ವಿಭಿನ್ನ ಮೇಲ್ಮೈಗಳನ್ನು ಸ್ಪರ್ಶಿಸುವುದು

D:-ಗುಂಪಿನಿಂದ ಪ್ರತಿಯೊಂದು ವಸ್ತುವನ್ನು ಆಯ್ಕೆ ಮಾಡುವುದು

Correct Answer:- Option-B

Question45:-ಕಥೆಯನ್ನು ಕೇಳುತ್ತಿದ್ದಂತೆ ಮುಕ್ತವಾಗಿ ಪ್ರಶ್ನೆಗಳನ್ನು ಕೇಳುವ ಪ್ರಿಸ್ಕೂಲ್ ಕಲಿಕೆಯ ಸಾಮರ್ಥ್ಯ ಯಾವುದು ?

A:-ಸ್ಮರಣೆಯನ್ನು ನಿರ್ಣಯಿಸುವುದು

B:-ಸೃಜನಶೀಲತೆಯನ್ನು  ಅಭಿವೃದ್ಧಿಪಡಿಸುವುದು

C:-ಕೇಳಿದ್ದಕ್ಕೆ ನಿಖರವಾಗಿ ಹೇಗೆ ಪ್ರತಿಕ್ರಿಯಿಸಬೇಕೆಂದು ಕಲಿಯುವುದು

D:-ಶಬ್ದಭಂಡಾರವನ್ನು ಹೆಚ್ಚಿಸುವುದು

Correct Answer:- Option-B

Question46:-"ಎಲ್ಲಾ ಪ್ರಿಸ್ಕೂಲ್ ಮಕ್ಕಳು ಆಕಾರಗಳನ್ನು ಗುರುತಿಸಲು ಕಲಿಯುತ್ತಾರೆ. ಕೆಲವು ಆಕಾರಗಳನ್ನು ಗಾತ್ರದಿಂದ ವರ್ಗೀಕರಿಸಲಾಗುತ್ತದೆ." ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ ?

A:-ಪ್ರಿಸ್ಕೂಲ್ ವಯಸ್ಸಿನಲ್ಲಿ ಕೆಲವು ಆಕಾರಗಳನ್ನು ಗುರುತಿಸಲಾಗುವುದಿಲ್ಲ

B:-ಎಲ್ಲಾ ಆಕಾರಗಳನ್ನು ಗಾತ್ರದಿಂದ ವರ್ಗೀಕರಿಸಲಾಗುತ್ತದೆ

C:-ಕೆಲವು ಪ್ರಿಸ್ಕೂಲ್ ಮಕ್ಕಳು ಆಕಾರಗಳನ್ನು ಗುರುತಿಸಲು ಕಲಿಯುವುದಿಲ್ಲ

D:-ಎಲ್ಲಾ ಪ್ರಿಸ್ಕೂಲ್ ಮಕ್ಕಳು ಆಕಾರಗಳನ್ನು ಗಾತ್ರದಿಂದ ವರ್ಗೀಕರಿಸುತ್ತಾರೆ

Correct Answer:- Option-C

Question47:-ರಾಷ್ಟ್ರೀಯ ಶಿಕ್ಷಣ ನೀತಿಯ ಭಾಗವಾಗಿ ರಚಿಸಲಾದ ರಾಷ್ಟ್ರೀಯ ತಾಂತ್ರಿಕ ಶಿಕ್ಷಣ ವೇದಿಕೆಯ (NETF) ಉದ್ದೇಶ :

A:-ತಂತ್ರಜ್ಞಾನವನ್ನು ಪ್ರಸ್ತುತ ಕಲಿಕಾ ವಿಧಾನಗಳಿಗೆ ಹೊಂದಿಸಿಕೊಳ್ಳುವುದು

B:-ಪೂರ್ಣ ಸಮಯದ ಆನ್ ಲೈನ್ ಕಲಿಕಾ ವ್ಯವಸ್ಥೆಗಳನ್ನು ಸ್ಥಾಪಿಸುವುದು

C:-ತರಗತಿಯ ಅಗತ್ಯಗಳನ್ನು ಮೀರಿ ಡಿಜಿಟಲ್ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವುದು

D:-ಶಿಕ್ಷಕರು ಮತ್ತು ಸಂಸ್ಥೆಗಳಲ್ಲಿ  ತಂತ್ರಜ್ಞಾನ ಆಧಾರಿತ ಸಂಪನ್ಮೂಲಗಳನ್ನು ಹಂಚಿಕೊಳ್ಳುವುದು

Correct Answer:- Option-D

Question48:-ECCE ಪಠ್ಯಕ್ರಮವನ್ನು ಯೋಜಿಸುವ ಮತ್ತು ಕಾರ್ಯಗತಗೊಳಿಸುವ ಜವಾಬ್ದಾರಿಯನ್ನು ಯಾವ ಸಂಸ್ಥೆ ಹೊಂದಿದೆ ?

A:-ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಬುಡಕಟ್ಟು ವ್ಯವಹಾರಗಳ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಮತ್ತು ಶಿಕ್ಷಣ ಸಚಿವಾಲಯದೊಂದಿಗೆ ಜಂಟಿಯಾಗಿ

B:-ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಮಾತ್ರ

C:-ಶಿಕ್ಷಣ ಸಚಿವಾಲಯ ಮಾತ್ರ

D:-ರಾಜ್ಯಗಳು

Correct Answer:- Option-A

Question49:-ಶಿಶುಪಾಲನಾ ಪಠ್ಯಕ್ರಮದ ಭಾಗವಾಗಿ ಸ್ಥಳೀಯ ಸಂಪ್ರದಾಯಗಳನ್ನು ಸೇರಿಸಲು ರಾಷ್ಟ್ರೀಯ ಪಠ್ಯಕ್ರಮವನ್ನು ವ್ಯಾಖ್ಯಾನಿಸಲು ಕಾರಣಗಳು

A:-ಏಕರೂಪದ ರಾಷ್ಟ್ರೀಯ ಪಠ್ಯಕ್ರಮವನ್ನು ಖಚಿತಪಡಿಸಿಕೊಳ್ಳುವುದು

B:-ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಸ್ಥಳೀಯ ಸಂಪ್ರದಾಯಗಳನ್ನು ಸೇರಿಸುವಲ್ಲಿನ ತೊಂದರೆಗಳನ್ನು ತಪ್ಪಿಸುವುದು

C:-ಬುಡಕಟ್ಟು ಗುಂಪುಗಳು ವಾಸಿಸುವ ವಿಶೇಷ ಕ್ಷೇತ್ರಗಳನ್ನು ಸುಧಾರಿಸುವುದು

D:-ಕಲೆಗಳು, ಕಥೆಗಳು, ಕವಿತೆಗಳು, ಆಟಗಳು ಇತ್ಯಾದಿಗಳನ್ನು ಒಳಗೊಂಡಂತೆ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳನ್ನು ಸೇರಿಸುವುದು

Correct Answer:- Option-A

Question50:-ವಿಕಲಚೇತನ ಮಕ್ಕಳ ಅಗತ್ಯಗಳನ್ನು ಪರಿಗಣಿಸಲು "ವಿದ್ಯಾಪ್ರವೇಶ" ಮಾರ್ಗಸೂಚಿಗಳ ಭಾಗವಾಗಿ, ಇದು ಮುಖ್ಯವಾಗಿದೆ :

A:-ಮಕ್ಕಳಿಗೆ ಒದಗಿಸಲಾದ ಎಲ್ಲಾ ಕಲಿಕಾ ಸಾಮಗ್ರಿಗಳನ್ನು ಒದಗಿಸುವುದು

B:-ಭಾವನಾತ್ಮಕ ಮತ್ತು ಸಾಮಾಜಿಕ ಅಂಶಗಳ ಮೇಲೆ ಕೇಂದ್ರೀಕರಿಸದೆ ಶೈಕ್ಷಣಿಕ ಸಾಧನೆಯ ಮೇಲೆ ಕೇಂದ್ರೀಕರಿಸುವುದು

C:-ಕಲಿಕೆಯ ಸವಾಲುಗಳಿಗೆ ಸೂಕ್ತವಾದ ವಿಷಯದ ಮೇಲೆ ಕೇಂದ್ರೀಕರಿಸುವುದು

D:-ಅಂಗವಿಕಲ ವಿದ್ಯಾರ್ಥಿಗಳು ತಮ್ಮದೇ ಆದ ವೇಗದಲ್ಲಿ ಕಲಿಯಲು ಸಹಾಯ ಮಾಡಲು ವೈಯಕ್ತಿಕ ಬೆಂಬಲ ಮತ್ತು ಪ್ರತಿಕ್ರಿಯೆಯನ್ನು ಒದಗಿಸುವುದು

Correct Answer:- Option-D

Question51:-ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಮಗುವಿನ ಪೋರ್ಟ್ ಫೋಲಿಯೊವನ್ನು (ಖಾತೆ) ಸಿದ್ಧಪಡಿಸುವ ಪ್ರಾಮುಖ್ಯತೆ.

A:-ಪ್ರತಿ ಹಂತದಲ್ಲೂ ಮಗುವಿನ ವೈಯಕ್ತಿಕ ಪ್ರಗತಿಯನ್ನು ಅನುಕರಿಸುವುದು ಮತ್ತು ದಾಖಲಿಸುವುದು

B:-ಮಗುವಿನ ಮಿತಿಗಳನ್ನು ಗುರುತಿಸುವುದು, ಅವುಗಳನ್ನು ಗೆಳೆಯರೊಂದಿಗೆ ಹೋಲಿಸುವುದು

C:-ಶೈಕ್ಷಣಿಕ ವರ್ಷದ ಸಾಧನೆಗಳನ್ನು ಸಂಕಲಿಸುವುದು ಮತ್ತು ಪೋಷಕರೊಂದಿಗೆ ಹಂಚಿಕೊಳ್ಳುವುದು

D:-ಮಗುವಿನ ಬೆಳವಣಿಗೆಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವುದು

Correct Answer:- Option-A

Question52:-ಬೆಳವಣಿಗೆಯ ಹಂತಗಳಲ್ಲಿನ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಲು, ಮಗುವನ್ನು ಗಮನಿಸುವಾಗ ಈ ಕೆಳಗಿನವುಗಳನ್ನು  ಪರಿಗಣಿಸಿ

A:-ತರಗತಿಯಲ್ಲಿನ ಪ್ರತಿ ಮಗುವಿನ ಪ್ರದರ್ಶನಗಳನ್ನು ಪರಸ್ಪರ ಹೋಲಿಸುವುದು

B:-ವೈಯಕ್ತಿಕವಾಗಿ ಮೌಲ್ಯಮಾಪನ ಮಾಡಿದ ದಾಖಲೆಗಳು ಮತ್ತು ಗುಣಲಕ್ಷಣಗಳ ಕುರಿತು ಅಭಿಪ್ರಾಯಗಳು

C:-ವೈಯಕ್ತಿಕ ವ್ಯತ್ಯಾಸಗಳನ್ನು ಪರಿಗಣಿಸದೆ ವಸ್ತುನಿಷ್ಠ, ಸಣ್ಣ ಗುಂಪು ಪ್ರದರ್ಶನಗಳು

D:-ಮಗುವಿನ ನೈಸರ್ಗಿಕ ಪ್ರದರ್ಶನಗಳ ಮೇಲೆ ಪರಿಣಾಮ ಬೀರದಂತೆ ಸಂಗ್ರಹಿಸಲಾದ ಟಿಪ್ಪಣಿಗಳು

Correct Answer:- Option-C

Question53:-ಈ ಕೆಳಗಿನವುಗಳಲ್ಲಿ ಯಾವುದನ್ನು ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಮಂಡಳಿಯ ಜವಾಬ್ದಾರಿಯಾಗಿ ಪಟ್ಟಿ ಮಾಡಲಾಗಿಲ್ಲ ?

A:-ಶಿಕ್ಷಕ ಶಿಕ್ಷಣಕ್ಕೆ ಸಂಬಂಧಿಸಿದ ಸಮೀಕ್ಷೆಗಳು ಮತ್ತು ಅಧ್ಯಯನಗಳನ್ನು ನಡೆಸುವುದು ಮತ್ತು ಫಲಿತಾಂಶಗಳನ್ನು ಪ್ರಕಟಿಸುವುದು

B:-ಶಿಕ್ಷಕರ ನೇಮಕಾತಿಗಾಗಿ ನೀತಿಗಳನ್ನು ರೂಪಿಸುವುದು

C:-ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಶಿಫಾರಸುಗಳನ್ನು ಮಾಡುವುದು

D:-ಶಿಕ್ಷಕ ಶಿಕ್ಷಣದಲ್ಲಿ ನಾವೀನ್ಯತೆ ಮತ್ತು ಸಂಶೋಧನೆಯನ್ನು ಉತ್ತೇಜಿಸುವುದು

Correct Answer:- Option-B

Question54:-"ಪೋಷಣ್ ಭಿ. . . ಪಠೈ ಭಿ.." (PBPB) ಉಪಕ್ರಮದಡಿಯಲ್ಲಿ  ಯಾವ ಪಠ್ಯಕ್ರಮವು ಹುಟ್ಟಿನಿಂದ ಮೂರು ವರ್ಷದವರೆಗಿನ ಮಕ್ಕಳ ಮೇಲೆ ನಿರ್ದಿಷ್ಟವಾಗಿ ಕೇಂದ್ರೀಕರಿಸುತ್ತದೆ ?

A:-ಆಧಾರಶೀಲಾ

B:-ನವಚೇತನ

C:-ಸಕ್ಷಮ್

D:-ವರ್ಣ ಕುದರಾಮ್

Correct Answer:- Option-B

Question55:-ಈ ಕೆಳಗಿನವುಗಳಲ್ಲಿ ಯಾವುದು ಕೊರತೆಯ ಕಾಯಿಲೆಗಳ ಗುಂಪಿಗೆ ಸೇರಿದೆ ?

i) ಮರಾಸ್ಮಸ್, ಪೋಲಿಯೊ, ರಕ್ತಹೀನತೆ, ಗಾಯ್ ಟರ್ (ಗಳಗಂಡ)
ii) ಕ್ವಾಶಿಯೋರ್ಕರ್, ರಾತ್ರಿ ಕುರುಡುತನ, ರಿಕೆಟ್ಸ್ (ಕುಟಿಲವಾತ), ಬೆರಿಬೆರಿ
iii) ಕ್ಷಯ, ರಕ್ತಹೀನತೆ, ಆನೆಕಾಲು, ಕ್ವಾಶಿಯೋರ್ಕರ್
iv) ರಾತ್ರಿ ಕುರುಡುತನ, ರಿಕೆಟ್ಸ್, ರಕ್ತಹೀನತೆ, ಮರಾಸ್ಮಸ್

A:-i, iii

B:-ii, iv

C:-ii, iii

D:-i, ii, iv

Correct Answer:- Option-B

Question56:-ಮಾನವ ದೇಹದಲ್ಲಿ ಯಾವ ಹಾರ್ಮೋನ್ ಉತ್ಪಾದನೆ ಕಡಿಮೆಯಾದಾಗ ಮಧುಮೇಹ ಉಂಟಾಗುತ್ತದೆ ?

A:-ಗ್ಲುಕಗನ್

B:-ಆಕ್ಸಿಟೋಸಿನ್

C:-ಇನ್ಸುಲಿನ್

D:-ಈಸ್ಟ್ರೊಜೆನ್

Correct Answer:- Option-C

Question57:-ಒಬ್ಬ ವ್ಯಕ್ತಿಗೆ ಸಾಮಾನ್ಯ ಬಾಡಿ ಮಾಸ್ ಇಂಡೆಕ್ಸ್ (Normal BMI) ಎಷ್ಟು ?

A:-25 - 29.9 kg/m²

B:-30 - 35 kg/m²

C:-17 - 18.5 kg/m²

D:-18.5 - 24.9 kg/m²

Correct Answer:- Option-D

Question58:-ಮಾನವ ದೇಹದಲ್ಲಿ ಶಕ್ತಿಯ ಚಯಾಪಚಯ ಕ್ರಿಯೆಯನ್ನು ನಿಯಂತ್ರಿಸುವ ಥೈರಾಕ್ಸಿನ್ ಉತ್ಪಾದನೆಗೆ ಯಾವ ಖನಿಜ ಅಗತ್ಯವಿದೆ ?

A:-ಅಯೋಡಿನ್

B:-ಕ್ಯಾಲ್ಸಿಯಂ

C:-ಕಬ್ಬಿಣ

D:-ಮೆಗ್ನೀಸಿಯಮ್

Correct Answer:- Option-A

Question59:-ಕೆಳಗೆ ನೀಡಲಾದ ಕೊಬ್ಬು-ಕರಗುವ ಜೀವಸತ್ವಗಳ ಗುಂಪನ್ನು ಆಯ್ಕೆಮಾಡಿ ಬರೆಯಿರಿ.

A:-ವಿಟಮಿನ್ A, B, C, D

B:-ವಿಟಮಿನ್ A, D, E, K

C:-ವಿಟಮಿನ್ A, C, D, K

D:-ವಿಟಮಿನ್ B, C, D, E

Correct Answer:- Option-B

Question60:-ದೇಹವು ಒಂದು ಗ್ರಾಂ ಪೋಷಕಾಂಶವನ್ನು ಸಂಪೂರ್ಣವಾಗಿ ಬಳಸಿದಾಗ ಯಾವ ಪೋಷಕಾಂಶವು ಹೆಚ್ಚಿನ ಶಕ್ತಿಯನ್ನು ಒದಗಿಸುತ್ತದೆ ?

A:-ಜೀವಸತ್ವಗಳು

B:-ಪ್ರೋಟೀನ್

C:-ಪಿಷ್ಟ

D:-ಕೊಬ್ಬು

Correct Answer:- Option-D

Question61:-ಪ್ರಿಸ್ಕೂಲ್ ಶೈಕ್ಷಣಿಕ ಪರಿಸರದ ಗುಣಲಕ್ಷಣಗಳಿಗೆ ಯಾವ ಹೇಳಿಕೆ ಹೊಂದಿಕೆಯಾಗುವುದಿಲ್ಲ ?

A:-ಬರವಣಿಗೆಯ ಚಟುವಟಿಕೆಗಳು ಕಡ್ಡಾಯವಾಗಿರುವ ಸಂದರ್ಭಗಳು

B:-ಮಕ್ಕಳ ಆಸಕ್ತಿಗಳು ಮತ್ತು ಸ್ವಭಾವಕ್ಕೆ ಸರಿಹೊಂದುವ ವಿವಿಧ ಚಟುವಟಿಕೆಗಳಿಗೆ ಅವಕಾಶಗಳು

C:-ಸೂಕ್ಷ್ಮ ಮತ್ತು ಸ್ಥೂಲ ಚಾಲನಾ ಅಭಿವೃದ್ಧಿಯನ್ನು ಉತ್ತೇಜಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಅವಕಾಶಗಳು

D:-ವಿಚಾರಗಳು, ಆಲೋಚನೆಗಳು ಮತ್ತು ಭಾವನೆಗಳನ್ನು ಮುಕ್ತವಾಗಿ ಮತ್ತು ನಿರರ್ಗಳವಾಗಿ ವ್ಯಕ್ತಪಡಿಸುವ ಅವಕಾಶಗಳು

Correct Answer:- Option-A

Question62:-2020ರ ಕೋವಿಡ್ ಸಂದರ್ಭದಲ್ಲಿ ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಪ್ರಿಸ್ಕೂಲ್ ಶಿಕ್ಷಕರು, ಮಕ್ಕಳು ಮತ್ತು ಪೋಷಕರನ್ನು ಕೇಂದ್ರೀಕರಿಸಿ ಯಾವ ತರಬೇತಿ ಕಾರ್ಯಕ್ರಮವನ್ನು ನಡೆಸಿತು ?

A:-ಕಲಿವಂಡಿ

B:-ಥಲೋಲಂ

C:-ಪ್ರಶಿಕ್ಷಾ

D:-ಅರುಮಾ

Correct Answer:- Option-C

Question63:-ಪ್ರಿಸ್ಕೂಲ್ ಮಕ್ಕಳಲ್ಲಿ ಸೂಕ್ಷ್ಮ ಮತ್ತು ಸ್ಥೂಲ ಸ್ನಾಯು ಬೆಳವಣಿಗೆ ಮತ್ತು ಕೈ-ಕಣ್ಣಿನ ಸಮನ್ವಯವನ್ನು ಯಾವ ಚಟುವಟಿಕೆ ಪರಿಸರವು ಅಭಿವೃದ್ಧಿಪಡಿಸಬಹುದು ?

A:-ಕರಕುಶಲ ಕ್ಷೇತ್ರ

B:-ಭಾಷಾ ಅಭಿವೃದ್ಧಿ ಕ್ಷೇತ್ರ

C:-ಗಣಿತ ಕ್ಷೇತ್ರ

D:-ಅಭಿವ್ಯಕ್ತಿ ಕ್ಷೇತ್ರ

Correct Answer:- Option-A

Question64:-ಶಿಕ್ಷಣ ನೀತಿಯನ್ನು ರೂಪಿಸುವ ಮತ್ತು ಅನುಷ್ಠಾನಗೊಳಿಸುವ, ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆಯನ್ನು ಉತ್ತೇಜಿಸುವ ಮತ್ತು ಶೈಕ್ಷಣಿಕ ಸಲಹೆಯನ್ನು ನೀಡುವ ಉದ್ದೇಶಗಳೊಂದಿಗೆ ಯಾವ ರಾಷ್ಟ್ರೀಯ ಮಟ್ಟದ ಸಂಸ್ಥೆ ಕಾರ್ಯ ನಿರ್ವಹಿಸುತ್ತದೆ ?

A:-SCERT

B:-ICCW

C:-NCTE

D:-NCERT

Correct Answer:- Option-D

Question65:-ಕೇರಳದ ಸಾರ್ವಜನಿಕ ಶಾಲೆಗಳ ಪ್ರಿಸ್ಕೂಲ್ ಶಿಕ್ಷಕರಿಗೆ ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (SCERT) ಯಾವ ಬೋಧನಾ ಸಹಾಯವನ್ನು ಸಿದ್ಧಪಡಿಸಿದೆ ?

A:-ಮಳವಿಲ್ಲು

B:-ಕಲಿಥೋನಿ

C:-ಕಲಿಪ್ಪಟ್ಟಂ

D:-ಅಂಗನಪೂಮಳ

Correct Answer:- Option-C

Question66:-ಜಿನೀವಾದಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಯಾವ ಸಂಸ್ಥೆಯು ವಿಶ್ವದ ಜನಸಂಖ್ಯೆಗೆ ಉನ್ನತ ಮಟ್ಟದ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಆರೋಗ್ಯವನ್ನು ಸಾಧಿಸುವ ಗುರಿಯನ್ನು ಹೊಂದಿದೆ ?

A:-ICFCW

B:-IRCS

C:-UNDP

D:-WHO

Correct Answer:- Option-D

Question67:-ಈ ಕೆಳಗಿನವುಗಳಲ್ಲಿ ಯಾವುದನ್ನು ಪ್ರಿಸ್ಕೂಲ್ ನ ಭೌತಿಕ ಪರಿಸರದಲ್ಲಿ ಸೇರಿಸಲಾಗಿದೆ ?

A:-ಎಲ್ಲಾ ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಲು ಮತ್ತು ವಾದಗಳನ್ನು ಮಂಡಿಸಲು ಅವಕಾಶಗಳು

B:-ಮಗುಸ್ನೇಹಿ ಮತ್ತು ಲಿಂಗಸ್ನೇಹಿ ರೀತಿಯಲ್ಲಿ ವಿನ್ಯಾಸಗೊಳಿಸಲಾದ ತರಗತಿ ಕೊಠಡಿಗಳು ಮತ್ತು ಆಟದ ಸಲಕರಣೆಗಳ ಲಭ್ಯತೆ

C:-ಪ್ರತಿಯೊಬ್ಬ ಕಲಿಕೆದಾರನನ್ನು ಪರಿಗಣಿಸುವ ಚಟುವಟಿಕೆಗಳು

D:-ಮಕ್ಕಳ ನಡುವೆ ಮತ್ತು ಮಕ್ಕಳು ಮತ್ತು ಶಿಕ್ಷಕರ ನಡುವೆ ನಿರಂತರ ಸಂವಹನಕ್ಕಾಗಿ ಅವಕಾಶಗಳು

Correct Answer:- Option-B

Question68:-ನಾಟಕ ವಿಭಾಗದಲ್ಲಿ ಕೇರಳ ರಾಜ್ಯ ಮಕ್ಕಳ ಸಾಹಿತ್ಯ ಸಂಸ್ಥೆಯ 2024 ರ ಮಕ್ಕಳ ಸಾಹಿತ್ಯ ಪ್ರಶಸ್ತಿಯನ್ನು ಗೆದ್ದ ಕೃತಿ ಯಾವುದು ?

A:-ಕುಟ್ಟಿಕಲುಡೆ ಎಳುತಚ್ಚನ್

B:-ಬೂತಮ್

C:-ಸಾಕ್ಷಿ

D:-ಪೂಮಾಲ

Correct Answer:- Option-C

Question69:-ಪ್ರಿಸ್ಕೂಲ್ ಶಿಕ್ಷಣ ಕಾರ್ಯಕ್ರಮದಲ್ಲಿ ಸಮುದಾಯದ ಪ್ರಮುಖ ಪಾತ್ರವೇನು ?

A:-ಶಾಲಾ ಕಟ್ಟಡವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುವುದು

B:-ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸುವುದು

C:-ಮಕ್ಕಳ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅವರ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳುವುದು

D:-ಶಾಲೆಯ ಅಭಿವೃದ್ಧಿಗೆ ಅಗತ್ಯವಾದ ಆರ್ಥಿಕ ನೆರವು ನೀಡುವುದು

Correct Answer:- Option-C

Question70:-ಪ್ರಿಸ್ಕೂಲ್ ಶಿಕ್ಷಕರು ಮತ್ತು ಪೋಷಕರ ನಡುವಿನ ಸಂಬಂಧವನ್ನು ಸುಧಾರಿಸಲು ಈ ಕೆಳಗಿನವುಗಳಲ್ಲಿ ಯಾವುದು ಉತ್ತಮ ಮಾರ್ಗ ?

A:-ಮಕ್ಕಳ ಪ್ರಗತಿ ವರದಿಗಳನ್ನು ಪೋಷಕರಿಗೆ ಕಳುಹಿಸುವುದು

B:-ಮಕ್ಕಳ ಮನೆಗಳಿಗೆ ಭೇಟಿ ನೀಡುವುದು

C:-ಪ್ರತಿ ವರ್ಷ ಒಂದು ಸಲ ಪಿಟಿಎ ಸಭೆಯನ್ನು ನಡೆಸುವುದು

D:-ಮಗುವಿನ ಪ್ರಗತಿಯ ಬಗ್ಗೆ ಫೋನ್ ಮೂಲಕ ಸಂವಹನ ನಡೆಸುವುದು

Correct Answer:- Option-B

Question71:-ಆರ್ ಟಿ ಇ ಕಾಯ್ದೆ 2009ರ ಪ್ರಕಾರ, ಎಲ್ಲಾ ಮಕ್ಕಳು ಯಾವ ವಯಸ್ಸಿನಲ್ಲಿ ಶಾಲೆಗೆ ಪ್ರವೇಶ ಪಡೆಯಬೇಕು ?

A:-6 ವರ್ಷಗಳು

B:-5 ವರ್ಷಗಳು

C:-4 ವರ್ಷಗಳು

D:-7 ವರ್ಷಗಳು

Correct Answer:- Option-A

Question72:-ಪ್ರಿಸ್ಕೂಲ್ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಸೂಕ್ತವಾದ ಹೇಳಿಕೆಯನ್ನು ಆರಿಸಿ ಬರೆಯಿರಿ

A:-ಪರೀಕ್ಷೆಗಳನ್ನು ನಡೆಸಿ ವಿಜೇತರಿಗೆ ಬಹುಮಾನಗಳನ್ನು ನೀಡುವುದು

B:-ನಿಯಮಿತ ಮತ್ತು ಸಮಗ್ರ ವೀಕ್ಷಣೆಯ ಮೂಲಕ ಮಗುವಿನ ಬೆಳವಣಿಗೆಯನ್ನು ದಾಖಲಿಸುವುದು

C:-ವರ್ಷಕ್ಕೆ ಕನಿಷ್ಠ ಎರಡು ಬಾರಿ ಪರೀಕ್ಷೆಗಳನ್ನು ನಡೆಸುವುದು

D:-ಪರೀಕ್ಷೆಗಳನ್ನು ನಡೆಸಿ ಪೋಷಕರಿಗೆ ವಾರ್ಷಿಕ ವರದಿಗಳನ್ನು ಒದಗಿಸುವುದು

Correct Answer:- Option-B

Question73:-ಯಾವ ಹೇಳಿಕೆಯು ಮಕ್ಕಳಲ್ಲಿನ ತಂತ್ರಜ್ಞಾನದ ಪರಿಣಾಮಕಾರಿ ಬಳಕೆಯನ್ನು ಉತ್ತಮವಾಗಿ ವಿವರಿಸುತ್ತದೆ ?

A:-ಎಲ್ಲಾ ಮಕ್ಕಳಿಗೆ ಸ್ಮಾರ್ಟ್ ಫೋನ್ ಗಳನ್ನು ಒದಗಿಸುವುದು

B:-ಹೆಚ್ಚಿನ ವೇಗದ ಇಂಟರ್ನೆಟ್ ಸಂಪರ್ಕವನ್ನು ಒದಗಿಸುವುದು

C:-ಇತ್ತೀಚಿನ ಗ್ಯಾಜೆಟ್ ಗಳನ್ನು ಹೊಂದುವುದನ್ನು ಅನುಮತಿಸುವುದು

D:-ವಯಸ್ಕರ ಮಾರ್ಗದರ್ಶನ ಮತ್ತು ಸಾಮಾಜಿಕ ಸಂವಹನವನ್ನು ಅನುಮತಿಸುವುದು

Correct Answer:- Option-D

Question74:-ಒಂದು ಮಗುವಿನ ಪೋರ್ಟ್ ಫೋಲಿಯೊ ಎಂದರೆ ಏನು ?

A:-ಮಗುವಿನ ಬಗ್ಗೆ ಶಿಕ್ಷಕರು ಇಟ್ಟುಕೊಳ್ಳುವ ವಾರ್ಷಿಕ ವರದಿ

B:-ಕಾಲಾಂತರದಲ್ಲಿ ಸಿದ್ಧಪಡಿಸಿದ ಮತ್ತು ಸಂಕಲಿಸಿದ ಕಲಿಕಾ ಸಾಮಗ್ರಿಗಳ ಸಂಗ್ರಹ

C:-ಪಠ್ಯಪುಸ್ತಕ ವಿಶ್ಲೇಷಣೆಗೆ ಬಳಸುವ ಸಾಮಗ್ರಿಗಳ ಸಂಗ್ರಹ

D:-ಮಗುವಿನ ಬಗೆಗಿನ ಶಾಲೆಯ ಆಡಳಿತ ದಾಖಲೆಗಳು

Correct Answer:- Option-B

Question75:-ಸಂಯೋಜಿತ ವಿಧಾನದ (Integrated approach) ಬಗ್ಗೆ ಯಾವ ಹೇಳಿಕೆ ಸರಿಯಾಗಿದೆ ?

A:-ಆಟವು ಮಕ್ಕಳಿಗೆ ಅತ್ಯಂತ ಸೂಕ್ತವಾದ ವಿಧಾನವಾಗಿದೆ

B:-ಮಕ್ಕಳ ಸ್ವಭಾವಕ್ಕೆ ಅನುಗುಣವಾಗಿ ಶಿಕ್ಷಕರು ಒಂದು ವಿಧಾನವನ್ನು ಅಳವಡಿಸಿಕೊಳ್ಳುತ್ತಾರೆ

C:-ವಿಭಿನ್ನ ವಿಧಾನಗಳ ವ್ಯವಸ್ಥಿತ ಏಕೀಕರಣ

D:-ಮಕ್ಕಳನ್ನು ನಿರಂತರವಾಗಿ ಮೌಲ್ಯಮಾಪನ ಮಾಡುವ ವಿಧಾನ

Correct Answer:- Option-C

Question76:-ಪೋಷಕರು ತಮ್ಮ ಮಕ್ಕಳನ್ನು ಹೇಗೆ ನಡೆಸಿಕೊಳ್ಳಬೇಕು ? ಸರಿಯಲ್ಲದ ಹೇಳಿಕೆಯನ್ನು ಆರಿಸಿ ಬರೆಯಿರಿ.

A:-ಮಕ್ಕಳು ಸಮಸ್ಯೆಗಳನ್ನು ಎದುರಿಸಿ ನಿಲ್ಲುವುದು

B:-ಮಕ್ಕಳ ಸಮಂಜಸವಾದ ಅಗತ್ಯಗಳನ್ನು ಪೂರೈಸುವುದು

C:-ಮಾರ್ಗದರ್ಶನ ಮತ್ತು ಮಾದರಿಯನ್ನು ಒದಗಿಸುವುದು

D:-ಮಕ್ಕಳಿಗೆ ಬೇಷರತ್ತಾದ ಪ್ರೀತಿ ಮತ್ತು ವಾತ್ಸಲ್ಯವನ್ನು ಒದಗಿಸುವುದು

Correct Answer:- Option-D

Question77:-ಪ್ರಿಸ್ಕೂಲ್ ನಲ್ಲಿ ಪ್ರತಿಕ್ರಿಯೆಯನ್ನು ಹೇಗೆ ಒದಗಿಸಬಹುದು ? ಸೂಕ್ತವಲ್ಲದುದನ್ನು ಆರಿಸಿ ಬರೆಯಿರಿ.

A:-ಉದಾಹರಣೆಗಳನ್ನು ಪ್ರಸ್ತುತಪಡಿಸುವ ಮೂಲಕ

B:-ಸರಳವಾದ ಚಿಂತನಶೀಲ ಪ್ರಶ್ನೆಗಳನ್ನು ಕೇಳುವ ಮೂಲಕ

C:-ನಿಖರವಾದ ಸೂಚನೆಗಳನ್ನು ನೀಡುವ ಮೂಲಕ

D:-ಪೋರ್ಟ್ ಫೋಲಿಯೊಗಳನ್ನು ಹೋಲಿಸುವ ಮತ್ತು ಮೌಲ್ಯಮಾಪನ ಮಾಡುವ ಮೂಲಕ

Correct Answer:- Option-D

Question78:-ಈ ಕೆಳಗಿನವುಗಳಿಂದ ಮಾತಿನ ದುರ್ಬಲತೆಗೆ (ವಾಕ್ ನ್ಯೂನತೆ) ಮುಖ್ಯ ಕಾರಣವನ್ನು ಆರಿಸಿ ಬರೆಯಿರಿ.

A:-ಶ್ರವಣ ದೋಷ

B:-ದೃಷ್ಟಿ ದೋಷ

C:-ಪೌಷ್ಟಿಕಾಂಶದ ಕೊರತೆ

D:-ಬೌದ್ಧಿಕ ಅಂಗವೈಕಲ್ಯ

Correct Answer:- Option-A

Question79:-ಪ್ರಿಸ್ಕೂಲ್ ನಲ್ಲಿ ಪರಿಗಣಿಸಲಾದ 30 ವಿಷಯಗಳಲ್ಲಿ ಎಷ್ಟು ಪ್ರಮುಖ ವಿಷಯಗಳಾಗಿವೆ ?

A:-27 ವಿಷಯಗಳು

B:-26 ವಿಷಯಗಳು

C:-25 ವಿಷಯಗಳು

D:-24 ವಿಷಯಗಳು

Correct Answer:- Option-B

Question80:-ವಿಷಯಗಳನ್ನು ಪರಿಗಣಿಸುವಾಗ ಈ ಕೆಳಗಿನವುಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಸೂಕ್ತವಲ್ಲದ ಹೇಳಿಕೆಯನ್ನು ಆರಿಸಿ ಬರೆಯಿರಿ.

A:-ಅನೌಪಚಾರಿಕ ಕಲಿಕೆಯ ಮಟ್ಟಕ್ಕೆ ಜಾರಿಕೊಳ್ಳದಿರಲು ಪ್ರಯತ್ನಿಸಿ

B:-ವಿಚಾರಗಳನ್ನು ಒಟ್ಟುಗೂಡಿಸುವ ಸಾಧನವನ್ನಾಗಿ ಮಾಡಬೇಡಿ

C:-ವಿಷಯಗಳ ಪರಸ್ಪರ ಸಂಬಂಧವನ್ನು ಪರಿಗಣಿಸಿ ಮತ್ತು ಅನುಭವಗಳನ್ನು ಒದಗಿಸಿ

D:-ಹವಮಾನ ಮತ್ತು ಸ್ಥಳೀಯ ಗುಣಲಕ್ಷಣಗಳಿಗೆ ಅನುಗುಣವಾಗಿ ಹೊಂದಿಸಿ

Correct Answer:- Option-A

Question81:-ಪ್ರಿಸ್ಕೂಲ್ ನಲ್ಲಿ ಪ್ರಕೃತಿ ನಡಿಗೆಗಳ ಪ್ರಯೋಜನಗಳೇನು ? ಸೂಕ್ತವಲ್ಲದುದನ್ನು ಆರಿಸಿ ಬರೆಯಿರಿ.

A:-ಸಂಗ್ರಹಿಸುವ ಮನೋಭಾವ

B:-ನೀವು ನೋಡುವುದನ್ನು ಬರೆಯುವ ಸಾಮರ್ಥ್ಯ

C:-ಅನುಭವಗಳನ್ನು ವಿವರಿಸುವ ಸಾಮರ್ಥ್ಯ

D:-ಹತ್ತಿರದಿಂದ ಗಮನಿಸುವ ಸಾಮರ್ಥ್ಯ

Correct Answer:- Option-B

Question82:-ಅಸ್ಪಷ್ಟ ರೇಖೆಗಳು, ಚುಕ್ಕೆಗಳು ಮತ್ತು ವೃತ್ತಗಳನ್ನು ಬಳಸಿಕೊಂಡು ಚಿಕ್ಕ ಮಕ್ಕಳಿಂದ ಚಿತ್ರಗಳನ್ನು ಬಿಡಿಸುವ ವಿಧಾನಕ್ಕೆ ಏನೆಂದು ಹೆಸರಿಡಲಾಗಿದೆ ?

A:-ಕೊಲಾಜ್

B:-ಮಾರ್ಬ್ಲಿಂಗ್

C:-ಸ್ಕ್ರಿಬ್ಲಿಂಗ್

D:-ಫಿಂಗರ್ ಪೇಂಟಿಂಗ್

Correct Answer:- Option-C

Question83:-ಆಟದ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಮಕ್ಕಳು ಈ ಕೆಳಗಿನ ಯಾವ ಅನುಭವಗಳನ್ನು ಪಡೆಯುತ್ತಾರೆ ? ಸೂಕ್ತವಲ್ಲದುದನ್ನು ಆರಿಸಿ ಬರೆಯಿರಿ.

A:-ಆಟದ ನಿಯಮಗಳನ್ನು ಕೇಳಲು ಮತ್ತು ಅನುಸರಿಸಲು ಅವಕಾಶ

B:-ಆಟದ ಸಮಯದಲ್ಲಿ ಸ್ವಯಂಪ್ರೇರಿತ ಸಂಭಾಷಣೆಗೆ ಅವಕಾಶ

C:-ಆಟದ ಸಲಕರಣೆಗಳನ್ನು ವೀಕ್ಷಿಸಲು ಮತ್ತು ಸಂಗ್ರಹಿಸಲು ಅವಕಾಶ

D:-ಆಟದಲ್ಲಿ ಯಾವಾಗಲೂ ಮೊದಲಿಗನಾಗುವ ಮನೋಭಾವ

Correct Answer:- Option-D

Question84:-ಸೃಜನಶೀಲ-ಸೌಂದರ್ಯದ ಬೆಳವಣಿಗೆಯ ಕ್ಷೇತ್ರಕ್ಕೆ ಸಂಬಂಧಿಸದ ಚಟುವಟಿಕೆಯನ್ನು ಆರಿಸಿ ಬರೆಯಿರಿ.

A:-ಗಮನಿಸುವಿಕೆ

B:-ಚಿತ್ರಿಸುವಿಕೆ

C:-ಬಣ್ಣ ಬಳಿಯುವಿಕೆ

D:-ನಿರ್ಮಾಣ

Correct Answer:- Option-A

Question85:-ಕತ್ತರಿಗಳಿಂದ ಕಾಗದಗಳನ್ನು ಕತ್ತರಿಸುವ ಕ್ರಿಯೆಯು ಯಾವುದಕ್ಕೆ ಸಂಬಂಧಿಸಿದೆ ?

A:-ಸೂಕ್ಷ್ಮ ಚಾಲನಾ ಅಭಿವೃದ್ಧಿ

B:-ಸ್ಥೂಲ ಚಾಲನಾ ಅಭಿವೃದ್ಧಿ

C:-ಭಾಷಾ ಅಭಿವೃದ್ಧಿ

D:-ಮೇಲಿನ ಎಲ್ಲವೂ

Correct Answer:- Option-B

Question86:-ಮಕ್ಕಳ ಬೆಳವಣಿಗೆಯ ಮನೋವಿಜ್ಞಾನದ ಆಧಾರದ ಮೇಲೆ ಪ್ರಿಸ್ಕೂಲ್ ಅಭಿವೃದ್ಧಿ ಸಾಮರ್ಥ್ಯಗಳನ್ನು ಎಷ್ಟು ಕ್ಷೇತ್ರಗಳಾಗಿ ವರ್ಗೀಕರಿಸಲಾಗಿದೆ ?

A:-6 ಕ್ಷೇತ್ರಗಳು

B:-7 ಕ್ಷೇತ್ರಗಳು

C:-8 ಕ್ಷೇತ್ರಗಳು

D:-9 ಕ್ಷೇತ್ರಗಳು

Correct Answer:- Option-C

Question87:-ಈ ಕೆಳಗಿನವುಗಳಲ್ಲಿ ಯಾವುದು ಮಗುವಿನ ಲಕ್ಷಣವಲ್ಲ ?

A:-ಅಪಾರ ಕುತೂಹಲ

B:-ಗಮನದ ವ್ಯಾಪ್ತಿ

C:-ಅನುಕರಣೆ

D:-ಚಲನಶೀಲತೆ

Correct Answer:- Option-B

Question88:-ಪ್ರಿಸ್ಕೂಲ್ ವಿದ್ಯಾರ್ಥಿಗಳಿಗೆ ಕಲಿಕೆಯ ಆಧಾರವಾಗಿರಬೇಕಾದ ವಿಚಾರಗಳು ಈ ಕೆಳಗಿನಂತಿವೆ. ಸೂಕ್ತವಲ್ಲದುದನ್ನು ಆರಿಸಿ ಬರೆಯಿರಿ.

A:-ಕಲಿಕೆ ಅತ್ಯಂತ ಔಪಚಾರಿಕವಾಗಿರಬೇಕು

B:-ಕಲಿಕೆ ಕ್ರೀಡೆಆಧಾರಿತವಾಗಿರಬೇಕು

C:-ಚಟುವಟಿಕೆ ಆಧಾರಿತ

D:-ಸ್ಥಳೀಯವಾಗಿ ಪ್ರಸ್ತುತ ಮತ್ತು ಹೊಂದಿಕೊಳ್ಳುವಂತಿರಬೇಕು

Correct Answer:- Option-A

Question89:-ನೀವು ಯಾವ ವಯಸ್ಸಿನಲ್ಲಿ ನಿಮ್ಮ ಸ್ಥೂಲ ಮತ್ತು ಸೂಕ್ಷ್ಮ ಸ್ನಾಯುಗಳ ಮೇಲೆ ಕಡಿಮೆ ನಿಯಂತ್ರಣ ಹೊಂದಿರುತ್ತೀರಿ ?

A:-3-4 ವರ್ಷ ವಯಸ್ಸು

B:-4-5 ವರ್ಷ ವಯಸ್ಸು

C:-5-6 ವರ್ಷ ವಯಸ್ಸು

D:-6-7 ವರ್ಷ ವಯಸ್ಸು

Correct Answer:- Option-A

Question90:-ಶಾಲೆಯು ಒಂದು ಸಮುದಾಯವಾಗಿದೆ ಮತ್ತು ಅದರ ಯಶಸ್ಸು ಮತ್ತು ಚೈತನ್ಯವು ಬಾಹ್ಯ ಸಮುದಾಯ ಮತ್ತು ಶಾಲೆಯ ನಡುವಿನ ಪರಸ್ಪರ ಕ್ರಿಯೆಯನ್ನು ಅವಲಂಬಿಸಿರುತ್ತದೆ ಎಂದು ಯಾವ ಶಿಕ್ಷಣ ಆಯೋಗ ಅಭಿಪ್ರಾಯಪಟ್ಟಿದೆ ?

A:-ಮಾಧ್ಯಮಿಕ ಶಿಕ್ಷಣ ಆಯೋಗ

B:-ಕೊಠಾರಿ ಆಯೋಗ

C:-ಯಶ್ಪಾಲ್ ಆಯೋಗ

D:-ರಾಧಾಕೃಷ್ಣನ್ ಆಯೋಗ

Correct Answer:- Option-A

Question91:-ಈ ಕೆಳಗಿನವುಗಳಲ್ಲಿ ಯಾವುದು ಮಕ್ಕಳ ಕೇಂದ್ರಿತ ಕಲಿಕಾ ವಿಧಾನವಾಗಿದೆ ?

A:-ಪ್ರೇರಣಾತ್ಮಕ ವಿಧಾನ

B:-ಅನುಮಾನಾತ್ಮಕ ವಿಧಾನ

C:-ಯೋಜನಾ ವಿಧಾನ

D:-ವಿಶ್ಲೇಷಣಾತ್ಮಕ ವಿಧಾನ

Correct Answer:- Option-A

Question92:-ಈ ಕೆಳಗಿನವುಗಳಲ್ಲಿ ಯಾವುದು ಮೌಲ್ಯಮಾಪನದ ಲಕ್ಷಣವಲ್ಲ ?

A:-ಚಟುವಟಿಕೆಯೊಂದಿಗೆ ನಿರಂತರವಾಗಿ ಸಂಭವಿಸುವುದು

B:-ಮೌಲ್ಯಮಾಪನವು ಪರಿಮಾಣಾತ್ಮಕವಾಗಿರುವುದು

C:-ಕಲಿಯುವವರ ಪ್ರಗತಿಯನ್ನು ಖಚಿತಪಡಿಸಿಕೊಳ್ಳುವುದು

D:-ತರಗತಿ ಬಡ್ತಿಗೆ ಅರ್ಹತೆಯನ್ನು ನಿರ್ಧರಿಸುವುದು

Correct Answer:- Option-D

Question93:-ದೃಷ್ಟಿಹೀನತೆ ಹೊಂದಿರುವ ಮಕ್ಕಳಿಗೆ ಈ ಕೆಳಗಿನ ಯಾವ ಸಾಫ್ಟ್‌ವೇರ್ ವಿಭಾಗಗಳು ಉಪಯುಕ್ತವಾಗಿವೆ ? ಸೇರಿಕೊಳ್ಳದುದನ್ನು ಆರಿಸಿ ಬರೆಯಿರಿ.

A:-ಸ್ಕ್ರೀನ್ ರೀಡರ್ ಗಳು

B:-ಸ್ಪೀಚ್-ಟು-ಟೆಕ್ಸ್ಟ್ ಅಪ್ಲಿಕೇಶನ್ ಗಳು

C:-ಟೆಕ್ಸ್ಟ್-ಟು-ಸ್ಪೀಚ್ ಸಾಫ್ಟ್‌ವೇರ್

D:-ಸ್ಕ್ರೀನ್ ಮ್ಯಾಗ್ನಿಫೈಯರ್ ಗಳು

Correct Answer:- Option-B

Question94:-ಈ ಕೆಳಗಿನವುಗಳಲ್ಲಿ ಯಾವುದು ಮಕ್ಕಳ ಕಲಿಕೆಯ ಶೈಲಿಯ ಲಕ್ಷಣವಲ್ಲ ?

A:-ಸ್ವಾಭಾವಿಕತೆ

B:-ಸಮಗ್ರ ಸ್ವಭಾವ

C:-ಅನೌಪಚಾರಿಕತೆ

D:-ಘಟಕ ಪರೀಕ್ಷೆಗಳು

Correct Answer:- Option-D

Question95:-ಈ ಕೆಳಗಿನವುಗಳಿಂದ ಸೂಕ್ಷ್ಮ ಚಾಲನಾ ಅಭಿವೃದ್ಧಿಗೆ ಸಂಬಂಧಿಸಿದ ಚಟುವಟಿಕೆಯನ್ನು ಆಯ್ಕೆಮಾಡಿ ಬರೆಯಿರಿ.

A:-ಸೈಕ್ಲಿಂಗ್

B:-ಪ್ರಕೃತಿ ನಡಿಗೆ

C:-ಹತ್ತುವಿಕೆ - ಮಗುಚಿ ಬೀಳುವಿಕೆ

D:-ಸಾಹಸಗೀತೆ

Correct Answer:- Option-D

Question96:-ಪೂರ್ವ ಪ್ರಾಥಮಿಕ ವಲಯದಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಕಲಿಕಾ ಸೌಲಭ್ಯಗಳನ್ನು ಒದಗಿಸಲು ಸಮಗ್ರ ಶಿಕ್ಷಾ ಕೇರಳಂ ಸ್ಟಾರ್ಸ್ ಯೋಜನೆಯಡಿಯಲ್ಲಿ ಸಾಮಾನ್ಯ ಶಿಕ್ಷಣ ಇಲಾಖೆಯು ಜಾರಿಗೆ ತಂದ ಕಾರ್ಯಕ್ರಮದ ಹೆಸರೇನು ?

A:-ಮಳವಿಲ್ಲು

B:-ಲಿಟಲ್ ಕೈಟ್ಸ್

C:-ವರ್ಣಕೂದರಂ

D:-ಪೂಂಬಟ್ಟ

Correct Answer:- Option-C

Question97:-ಮಗುವು ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಪಡೆಯುವ ಪ್ರಯೋಜನಗಳನ್ನು ಕೆಳಗೆ ನೀಡಲಾಗಿದೆ. ಗುಂಪಿಗೆ ಸೇರದುದನ್ನು ಆರಿಸಿ ಬರೆಯಿರಿ.

A:-ಮಾಹಿತಿ ತಂತ್ರಜ್ಞಾನದಲ್ಲಿ ಪ್ರಾವೀಣ್ಯವನ್ನು ಪಡೆಯುತ್ತದೆ

B:-ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆ ಸಾಧ್ಯ

C:-ಸೂಕ್ಷ್ಮ ಚಾಲನಾ ಬೆಳವಣಿಗೆಗೆ ಅವಕಾಶವನ್ನು ಒದಗಿಸುತ್ತದೆ

D:-ಕೈ-ಕಣ್ಣುಗಳ ಸಮನ್ವಯತೆ ಸಾಧ್ಯ

Correct Answer:- Option-A

Question98:-"ಮಕ್ಕಳಿಗಾಗಿರುವ ಉತ್ತಮ ಸಾಹಿತ್ಯವು ಮಗುವಿನ ಕಲ್ಪನೆ ಮತ್ತು ಸೃಜನಶೀಲ ಅಭಿವ್ಯಕ್ತಿಯನ್ನು ಉತ್ತೇಜಿಸುತ್ತದೆ - ಎಲ್ಲವೂ ಅದರ ಇಂದ್ರಿಯಗಳು ಮತ್ತು ಅನುಭವಗಳ ವ್ಯಾಪ್ತಿಯಲ್ಲಿದೆ" - ಇವು ಯಾರ ಮಾತುಗಳು ?

A:-ಸುಗತ ಕುಮಾರಿ

B:-ರಾಜಲಕ್ಷ್ಮೀ ಮುರಳೀಧರನ್

C:-ಡಿ. ಸುಜಾತಾ ದೇವಿ

D:-ಶಾಂತಾ ರಾಮಶ್ವರ ರಾವ್

Correct Answer:- Option-B

Question99:-ದೈನಂದಿನ ಕಲಿಕಾ ಯೋಜನೆಯ ಗುಣಲಕ್ಷಣಗಳು ಯಾವುವು ? ಗುಂಪಿಗೆ ಸೇರದುದನ್ನು ಆರಿಸಿ ಬರೆಯಿರಿ.

A:-ಚಟುವಟಿಕೆಗಳಿಗೆ ಔಪಚಾರಿಕ ಆರಂಭ ಮತ್ತು ಅಂತ್ಯವೆಂಬುದಿಲ್ಲ

B:-ಮಗುವು ತಾನು ಬಯಸಿದಂತೆ ಪ್ರಾರಂಭಿಸಬಹುದು ಮತ್ತು ಕೊನೆಗೊಳಿಸಬಹುದು

C:-ಸ್ಥಳೀಯ ಅವಕಾಶಗಳನ್ನು ಮತ್ತು ಸನ್ನಿವೇಶಗಳನ್ನು ಬಳಸಿಕೊಳ್ಳುವ ಅಗತ್ಯವಿಲ್ಲ

D:-ಚಟುವಟಿಕೆಗಳಿಗೆ ಅಗತ್ಯವಿರುವ ಕಲಿಕೆಯ ಆಟಿಕೆಗಳನ್ನು ಮುಂಚಿತವಾಗಿ ಸಿದ್ಧಪಡಿಸಲಾಗುತ್ತದೆ

Correct Answer:- Option-C

Question100:-ಪ್ರಿಸ್ಕೂಲ್ ಚಟುವಟಿಕೆ 'ಹಾಡುವುದು' ಯಾವ ಬೆಳವಣಿಗೆಯ ಕ್ಷೇತ್ರಕ್ಕೆ ಸಂಬಂಧಿಸಿದೆ ?

A:-ದೈಹಿಕ-ಚಾಲನಾ ಅಭಿವೃದ್ಧಿ

B:-ಸಾಮಾಜಿಕ-ಭಾವನಾತ್ಮಕ ಅಭಿವೃದ್ಧಿ

C:-ಭಾಷಾ ಅಭಿವೃದ್ಧಿ

D:-ಅರಿವಿನ ಅಭಿವೃದ್ಧಿ

Correct Answer:- Option-C